ಮಾನಸಿ

ತಿಂಗಳ ಪತ್ರಿಕೆ

ಸೆಪ್ಟೆಂಬರ್ : 1999

- ಖಂಡನಾರ್ಹ ದೌರ್ಜನ್ಯಗಳು
- ದುಡಿಯುವ ಮಹಿಳೆಗೆ ಲೈಂಗಿಕ ಕಿರುಕುಳ
- ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆ
- ದೇಶದ ಹಿತಾಸಕ್ತಿ = ಅರ್ಹತೆ
- ಒಡಲ ಸಂಕಟಕೆ ಗಡಿ ಉಂಟೇ? ಆಚೆ ಈಚೆ ಉಂಟೆ?

ಮಾನಸ

ತಿಂಗಳ ಪತ್ರಿಕೆ

ಸಂಪುಟ : 14 ಸಂಚಿಕೆ : 8

ಸೆಪ್ಟೆಂಬರ್ : 1999

ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **3-00** ರೂ.

ವಾರ್ಷಿಕ ಚಂದಾ **40-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



ಇತ್ತೀಚೆಗೆ ಸುಪ್ರೀಮ್ ಕೋರ್ಟ್ "ಸೂಪರ್ ಸ್ಪೆಷಾಲಿಟಿ ಕೋರ್ಸ್‌ಗಳಲ್ಲಿ ಮೀಸಲಾತಿ ಕೂಡದು" ಎಂಬುವ ತೀರ್ಪು ಕೊಟ್ಟು, ಇದೊಂದು ಐತಿಹಾಸಿಕ ತೀರ್ಪು ಹಾಗೂ "ರಾಷ್ಟ್ರೀಯ ಹಿತಾಸಕ್ತಿಯಿಂದ ಇದು ಒಳ್ಳೆಯದು" ಎನ್ನುವ ರಂಗನ್ನು ಬಳಿದಿದೆ. ಇದರ ಜೊತೆ ಜೊತೆಗೆ "ಮೀಸಲಾತಿ ವಿಚಾರವನ್ನು ಪರಿಶೀಲಿಸುತ್ತಿಲ್ಲ" ಎಂಬ ಹೇಳಿಕೆಯನ್ನೂ ಕೂಡ ಕೋರ್ಟ್ ನೀಡಿದೆ. ಸ್ವಾತಂತ್ರ್ಯ ಬಂದು 52 ವರ್ಷಗಳು ಸಂದರೂ, ಪ್ರಜಾಪ್ರಭುತ್ವದ ಆಳ್ವಿಕೆಯಿದ್ದರೂ, ಬಹುಜನರಿಗೆ ಇಂಥ ಶಿಕ್ಷಣಗಳಲ್ಲಿ ತೊಡಗಿಸಿಕೊಳ್ಳಲಾಗದ ಪರಿಸ್ಥಿತಿ ಇರುವಾಗ ಮೀಸಲಾತಿಯು ಅನಿವಾರ್ಯ ಎಂಬ ಅಂಶವನ್ನು ಸುಪ್ರೀಂ ಕೋರ್ಟ್ ಗುರುತಿಸಲಾಗದೇ ಹೋದದ್ದು ದುರಂತವೇ ಸರಿ. ಇಂಥ ಸನ್ನಿವೇಶಕ್ಕಾಗಿ ಕಾಯುತ್ತಿದ್ದವೇನೋ ಎಂಬಂತೆ ಮಾಧ್ಯಮಗಳು ದುರ್ಬಲ ವರ್ಗಗಳ ಮೇಲೆ ಎಗರಿ ಬಿದ್ದಿದ್ದು, ತರ್ಕರಹಿತ ವಿಷಯಗಳ ಮಳೆ ಸುರಿಸಿದ್ದು, ಮೀಸಲಾತಿ ಸಾಕು ಎಂಬ ಹುಯಿಲೆಬ್ಬಿಸಿದ್ದು ಖೇದವಲ್ಲದೆ ಇನ್ನೇನು?

ಮೀಸಲಾತಿ ಬಗ್ಗೆ ಇತ್ತೀಚೆಗೆ ಸುಪ್ರೀಂ ಕೋರ್ಟ್ ನೀಡಿದ ಎರಡು ಪ್ರಮುಖ ತೀರ್ಪುಗಳು ಚರ್ಚಾರ್ಹವಾಗಿವೆ. ದೇಶದ ಅಭಿವೃದ್ಧಿಯಲ್ಲಿ ಸರ್ವರ ಭಾಗಿತ್ವವನ್ನು ಬಯಸುವ ಪ್ರಜಾಪ್ರಭುತ್ವ ವ್ಯವಸ್ಥೆಯ ಆಶಯ ನನಸಾಗಿಸಲು ಮೀಸಲಾತಿಯನ್ನು ಬಳಸಲಾಗುತ್ತಿದೆ. ತುಳಿತಕ್ಕೊಳಪಟ್ಟವರು ಏಳುವುದಿರಲಿ, ಕಣ್ಣು ಬಿಡಲು ಶುರು ಮಾಡುತ್ತಿದ್ದಂತೆ ಅರ್ಹತೆ, ಅಭಿವೃದ್ಧಿ, ಸಾರ್ವಜನಿಕ ಹಿತ, ರಾಷ್ಟ್ರಹಿತ, ಮಾನವ ಹಕ್ಕು.... ಎಂಬಿತ್ಯಾದಿಗಳನ್ನು ಬಳಸುವ ಜಾಣ್ಮೆ ಕಾಣುತ್ತಿದೆ. ಇವ್ಯಾವುವೂ ಮೀಸಲಾತಿ ಹೊರತುಪಡಿಸಿದ ವಿಚಾರದಲ್ಲಿ ಅಂದರೆ ಡೊನೇಷನ್ ಸೀಟ್, ಸ್ಪೋರ್ಟ್ಸ್ ಸೀಟ್ ಇತ್ಯಾದಿಗಳಲ್ಲಿ, ವಿಚಾರದಲ್ಲಾಗಲಿ, ಆಚಾರದಲ್ಲಾಗಲಿ ಬಂದಿಲ್ಲವೆಂಬ ನಗ್ನ ಸತ್ಯ ಯಾರಿಗೂ ಕಾಣುತ್ತಿಲ್ಲ. ಸುಪ್ರೀಂ ಕೋರ್ಟ್ ಎತ್ತಿರುವ ದೇಶದ ಹಿತ, ಅಭಿವೃದ್ಧಿ, ಮೆರಿಟ್, ಇತ್ಯಾದಿ ವಿಷಯಗಳು ನಾಚಿಸುವಂತಿವೆ. ಏಕೆಂದರೆ ದೇಶ ಎಂದರೆ ಯಾರದ್ದು? ದೇಶದ ಹಿತ ಅಂದರೆ ಬಹುಕಾಲದಿಂದ ತುಳಿತಕ್ಕೊಳಗಾದವರ ಹಿತ ಎಂದಲ್ಲವೇ? ಅಭಿವೃದ್ಧಿ ಎಂದರೆ ಚಾರಿತ್ರಿಕವಾಗಿ ತುಳಿತಕ್ಕೊಳಗಾದವರ ಅಭಿವೃದ್ಧಿ ಎಂದಲ್ಲವೇ? ಮಾನವ ಹಕ್ಕು ಎಂದರೆ ಭಾರತದ ಬಹುಜನರ ಹಕ್ಕು ಎಂದಲ್ಲವೇ? ದೇಶದ ಹಿತದ ದೃಷ್ಟಿಯಿಂದ ಯೋಗ್ಯತೆ, ಅರ್ಹತೆ, ದಕ್ಷತೆ, ಕಾರ್ಯಕ್ಷಮತೆಗಳ ಬಗ್ಗೆ ಮಾತನಾಡುವ ತೀರ್ಪು ಯಾರ ದೇಶದ ಹಿತದ ಬಗ್ಗೆ ಮಾತನಾಡುತ್ತಿದೆ? ಈ ದೇಶಕ್ಕೆ ನಾವ್ಯಾರು? ನಾವೇನು? ಇದು ಯಾರ ಹಿತ ಕಾಯುವ ರಾಷ್ಟ್ರ ವ್ಯವಸ್ಥೆ? ಎಂಬೆಲ್ಲಾ ಪ್ರಶ್ನೆಗಳು ಏಳುತ್ತವೆ.

ಮೆರಿಟ್, ಅರ್ಹತೆ, ಕಾರ್ಯಕ್ಷಮತೆಯನ್ನು ಸಾಮಾಜಿಕ, ಸಾಂಸ್ಕೃತಿಕ ದೃಷ್ಟಿಕೋನದಿಂದ ನೋಡದಿದ್ದರೆ ಬಲಿಷ್ಠರ ಹಿತ-ಅಭಿವೃದ್ಧಿಯೇ ದೇಶದ ಅಭಿವೃದ್ಧಿ ಎಂದು ಅರ್ಥೈಸಿದಂತಾಗುತ್ತದೆ. ಇದರ ಬಗ್ಗೆ ಸಾಮಾಜಿಕ ನ್ಯಾಯಪರ ಗುಂಪುಗಳು ಸಂಘಟನೆಗಳು, ಪಕ್ಷಗಳು ವಿಚಾರ ಮಂಥನ ನಡೆಸಬೇಕು, ಜನಾಭಿಪ್ರಾಯ ಮೂಡಿಸಬೇಕು. ದುರ್ಬಲರಿಗೆ ಸಾಮಾಜಿಕ ನ್ಯಾಯ ದೊರೆತು, ಭಾಗಿತ್ವವು ಪ್ರಾಧಾನ್ಯ ಗಳಿಸಿ ಪ್ರಜಾಪ್ರಭುತ್ವವು ಅರ್ಥಪೂರ್ಣವಾಗಿ ವಿಕಸನಗೊಳ್ಳುವಂತಾಗಬೇಕು.

ಎಲ್ಲೆಡೆ ಚುನಾವಣೆ ಗಾಳಿ ಬೀಸುತ್ತಿದೆ. ಹಣದ ಹೊಳೆ ಹರಿಸಲು ಎಲ್ಲಾ ಪಕ್ಷಗಳು ತಯಾರಾಗಿವೆ. ಅಧಿಕಾರ ಹಿಡಿಯಲು ತಂತ್ರ, ಕುತಂತ್ರ, ಹೊಂದಾಣಿಕೆಗಳು ಜೋರಾಗಿ ನಡೆದಿದೆ. ಇಲ್ಲಿ ಅಧಿಕಾರದ ಆಸೆಗೆ ಹೊಸ ಸಮಾಜವಾದಿಗಳು ಕೇಸರಿಗಳೊಂದಿಗೆ ಶಾಮೀಲಾಗಿದ್ದಾರೆ. ಹೀಗಾದದ್ದು ಒಳ್ಳೆಯದೆ. ವೇಷಧಾರಿ ಸಮಾಜವಾದಿಗಳ ಕೇಸರಿ ರಕ್ತ ಬಯಲಾಗಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸುವ, ಪರಿಹಾರದ ಬಗ್ಗೆ ಯೋಚಿಸುವಂತಹ ಪ್ರಣಾಳಿಕೆಗಳನ್ನು ನೀಡದಿದ್ದರೂ ಪರಸ್ಪರ ಕೀಳು ಮಟ್ಟದ ವೈಯಕ್ತಿಕ ನಿಂದನೆಗಳನ್ನೆ agenda ಮಾಡಿಕೊಂಡು ಓಟು ಕೇಳುತ್ತಿರುವ ಪಕ್ಷಗಳಿಗೆ ಹೇಳಿಕೊಳ್ಳಲು ಮೂರುಕಾಸಿನ ಸಾಧನೆಯೂ ಇಲ್ಲ. ರಾಜಕೀಯ ಪಕ್ಷಗಳು ಸ್ವದೇಶಿ-ವಿದೇಶಿ, ಸೊಸೆ-ಮಗಳು ವಿಷಯವನ್ನು ಮಹತ್ವದ ರಾಷ್ಟ್ರೀಯ ಪ್ರಶ್ನೆಯನ್ನಾಗಿಸಿಬಿಟ್ಟವು. ವಿದೇಶಿ ಸೋನಿಯಾ ಆಗಲಿ, ಮೊಳದುದ್ದ ಬೈತಲೆಗೆ ಸೇರು ಕುಂಕುಮ ಸುರಿದುಕೊಳ್ಳುವ ಸುಷ್ಮಾ ಆಗಲಿ ನಮ್ಮ ಮಹಿಳೆಯರಿಗೆ ಅಪರಿಚಿತರೆ. ಉರಿ ಬಿಸಿಲಲ್ಲಿ ದುಡಿವ ಬಿರುಕು ಚರ್ಮದ ಮಹಿಳೆಯರಿಗೆ ನುಣುಪಿನ ಸೋನಿಯಾ, ಸುಷ್ಮಾರ ಬಗ್ಗೆ ಕುತೂಹಲ ಮೂಡಬಹುದೇ ಹೊರತು ಅವರೊಂದಿಗೆ ಏನನ್ನು identify ಮಾಡಿಕೊಳ್ಳಲಾರರು.

ದುರಂತವೆಂದರೆ ಜನರಿಗೆ ಬಿ.ಜೆ.ಪಿ., ಕಾಂಗ್ರೆಸ್ ಬಿಟ್ಟರೆ ಆಯ್ಕೆ ಮಾಡಿಕೊಳ್ಳಲು ಪರ್ಯಾಯವೆ ಇಲ್ಲದಿರುವುದು. ಇಂತಹ ಪರಿಸ್ಥಿತಿಯಲ್ಲು ಎಡ ಮತ್ತು ಪ್ರಗತಿ ಪರ ಪಕ್ಷಗಳು ಚುನಾವಣೆ ಎದುರಿಸಲು ಒಂದು Common Flatform ಮಾಡಿಕೊಳ್ಳದಿರುವುದು ದುರಂತ. ಅಲ್ಲದೆ ಹೊಸ ಪರ್ಯಾಯ ರಾಜಕೀಯ ಶಕ್ತಿಯನ್ನು ಹುಟ್ಟುಹಾಕಲು ಓಡಾಡಿದವರೆ ಗರತಿ, ಸೊಸೆ ಎಂಬಂತಹ ವಿಷಯಗಳಿಗೆ ಒತ್ತು ನೀಡಿದ್ದು ಪುರುಷ ಮೌಲ್ಯಗಳು ಹೇಗೆ ಕೆಲಸ ಮಾಡುತ್ತದೆ ಎನ್ನುವುದನ್ನು ತೋರಿಸುತ್ತದೆ ಮತ್ತು ಮಹಿಳಾಶಕ್ತಿಯನ್ನು ರಾಜಕೀಯ ಶಕ್ತಿಯನ್ನಾಗಿ ನೋಡದೆ, ಅಧಿಕಾರ ರಾಜಕೀಯಕ್ಕೆ ದಾಳಗಳನ್ನಾಗಿ ಬಳಸಿಕೊಳ್ಳುವುದು ಸ್ಪಷ್ಟವಾಗಿದೆ.

ದ್ವೇಷ

ನನ್ನ ವೈರಿ ಹತ್ತಿರ ಬಂದ
ಮತ್ತೆ ನಾನು
ನಿರುಕಿಸಿದೆ ಕಠಿಣವಾಗಿ ಆತನ ಮುಖವನ್ನು
ಸೆಡವಿನಲ್ಲಿ· ನನ್ನ ತುಟಿಗಳ ಕಚ್ಚಿ ಹಿಡಿದು
ಓರೆಗಣ್ಣಿನಲ್ಲಿ ಆತನನ್ನು ಕ್ರೂರವಾಗಿ ನೋಡಿದೆ
ನಂತರ ನಾನು ತಿರುಗುತ್ತಿದ್ದಾಗ, ನನ್ನ ವೈರಿ
ಕಪಿ ಹೃದಯದ, ಅನಾಗರಿಕ ಮನುಷ್ಯ ನನಗೆ ಹೇಳಿದ,
ಒಂದು ದಿನ ಇದೆಲ್ಲ ಇತಿಹಾಸವಾದಾಗ
ನಮ್ಮಲ್ಲಿರುವ ಬಾಣಗಳು ಮುಗಿದು ಹೋದಾಗ
ನಾವು ಒಬ್ಬರನ್ನೊಬ್ಬರು ಕೇಳಬಹುದು ನಾವೇಕೆ
ದ್ವೇಷಿಸುತ್ತೇವೆಂದು

ಬಹುಶಃ ಹೇಳಲಿಕ್ಕೆ ಕಥೆಯೇ ಇರುವುದಿಲ್ಲ
ಆಗ ಇದು ನಿಗೂಢವಾಗಿ ಕಾಣುತ್ತದೆ
ನಾವು ಒಬ್ಬರನ್ನೊಬ್ಬರು ದ್ವೇಷಿಸುತ್ತೇವೆಂಬುದು.
ಹೀಗೆ ನುಡಿದ ಆತ
ಅಲ್ಲಿಂದ ಕದಲಲಿಲ್ಲ.
ನಾನೇನು ಹೇಳಬಹುದೆಂದು ಕಾದು ನಿಂತ
ಆದರೆ ನಾನು ಅಲ್ಲಿಂದ ಓಡಿದೆ ಭೀತಿಯಿಂದ, ಅಲ್ಲಿದ್ದರೆ
ನಾನು ನನ್ನ ಸೇವಕಿಯನ್ನು ಮುದ್ದಿಸುವಂತೆ
ಆತನನ್ನು ಮುದ್ದಿಸಿಬಿಡುತ್ತೇನೆಂದು

- ಜೇಮ್ಸ್ ಸ್ಟೀಫನ್ಸ್

ಖಂಡನಾರ್ಹ ದೌರ್ಜನ್ಯಗಳು

ಉತ್ತರ ಪ್ರದೇಶ

ಉತ್ತರ ಪ್ರದೇಶದ ಬಾಂಡ ಎಂಬಲ್ಲಿ ಅಪ್ಪ ತನ್ನ ಹನ್ನೊಂದು ವರ್ಷದ ಮಗಳಿಗೆ ಒಂದು ವರ್ಷದಿಂದ ಲೈಂಗಿಕ ಕಿರುಕುಳ ನೀಡುತ್ತಿದ್ದುದು ಅವಳ ಅಮ್ಮ ಇಳಾಪಾಂಡೆ ಧೈರ್ಯಮಾಡಿ ಮಗಳನ್ನು ಇದೇ ಜೂನ್ 10 ರಂದು ವಾರಣಾಸಿಗೆ ಕರೆದುಕೊಂಡು ಬರುವವರೆಗೆ ನಡೆದಿದೆ. ಇಳಾ ವಾನಾಂಗನದ ಮಹಿಳಾ ಸಾಮುಖ್ಯ, ಎಸ್.ಎ.ಆರ್.ಸಿ. ಹಾಗೂ ಗುಡಿಯಾ ಸಂಸ್ಥೆಗಳ ಕಾರ್ಯಕರ್ತರ ನೆರವಿನಿಂದ ಜಿಲ್ಲಾ ಅಧಿಕಾರಿಗಳಿಗೆ ಮನವರಿಕೆ ಮಾಡಿ, ತಂಗಲು ವಸತಿ ಪಡೆದುಕೊಂಡರು.

ರಾಜ್ಯ ಡೈರಿಯಲ್ಲಿ ಮಾರಾಟದ ಅಧಿಕಾರಿಯಾಗಿರುವ ಜಗದೀಶ್ ದೇಶ್‌ಪಾಂಡೆ, ಉತ್ತರ ಪ್ರದೇಶ ಬ್ರಾಹ್ಮಣ ಲಾಬಿಯಲ್ಲಿ ಭಾರಿ ಕುಳವಾಗಿದ್ದು ಈ ಘಟನೆಯ ನಂತರ, ಹೆಂಡತಿಯನ್ನು, ಮಗುವನ್ನು ಹಾಗೂ ಕಾರ್ಯಕರ್ತರುಗಳನ್ನು ಹೆದರಿಸುತ್ತಾ ಬಂದ.

ಸ್ಥಳೀಯ ಗೂಂಡಾಗಳ ಹಾಗೂ ಪಾಂಡೆಯ ಬೆದರಿಕೆ ಹೆಚ್ಚಾದಾಗ ಹೆಂಡತಿ ಹಾಗೂ ಕಾರ್ಯಕರ್ತರು ಸೇರಿ ಒಂದು FIR ಅನ್ನು ಪಾಂಡೆಯ ವಿರುದ್ಧ ದಾಖಲಿಸಿದರು. ಇದಕ್ಕೆ ವಿರುದ್ಧವಾಗಿ ಆತ ಅರ್ಜಿಗಳನ್ನು ಹಾಕಿದನಾದರೂ ಜುಲೈ 22 ರಂದು ಹೈಕೋರ್ಟಿನಲ್ಲಿ ಅವೆಲ್ಲ ತಿರಸ್ಕರಿಸಲ್ಪಟ್ಟಿದ್ದಲ್ಲದೆ ಆತ ಬಂಧನಕ್ಕೊಳಗಾದ. ವಿಷಾದವೆಂದರೆ 10 ದಿನಗಳ ಹಿಂದೆ ಅವನಿಗೆ ಬೇಲ್ ತಿರಸ್ಕರಿಸಿದ್ದ ಹೆಚ್ಚುವರಿ ಮುಖ್ಯ ನ್ಯಾಯಾಧೀಶರು ಆಗಸ್ಟ್ 5 ರಂದು ಅವನ ಅರ್ಜಿ ಒಪ್ಪಿ ಅಂದೇ ಅವನಿಗೆ ಬೇಲ್ ಕೊಟ್ಟಿದ್ದಲ್ಲದೆ ಕಾರ್ಯಕರ್ತರ ಮೇಲೆ ಅಪಹರಣ ಹಾಗೂ ಕಳುವಿನ ಅಪರಾಧ ಹೇರಿ ಅವರಿಗೆ ಬೇಲ್ ರಹಿತ ವಾರೆಂಟ್ ಕೊಟ್ಟರು.

ಅಂದಿನಿಂದ ಅಲ್ಲಿನ ಪೊಲೀಸರು, ಜನರು, ಕೋರ್ಟಿನವರಿಂದ ಕಾರ್ಯಕರ್ತರಲ್ಲದೆ ಅವರ ಕುಟುಂಬದವರಿಗೂ ಬೆದರಿಕೆಗಳು ಪ್ರಾರಂಭವಾದವಲ್ಲದೆ ಓಡಾಡುವುದೂ ಕೂಡ ಹಿಂಸೆಯಾಗಿದೆ. ಈ ಹಿಂದೆ ಮೊದಲು ಹೆಸರಿಸಿದ ಸಂಸ್ಥೆಗಳು ಬಡವರ ಪರವಾಗಿ, ಭೂಹೀನರ ಪರವಾಗಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಿದ್ದು ಆ ಎಲ್ಲಾ ಅವಕಾಶಗಳನ್ನು ಶ್ರೀಮಂತ ಜನ, ವರ್ಗ, ಪುರುಷ ಸಮಾಜ ಈಗ ಬಳಸಿಕೊಳ್ಳುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ.

ಇದರ ಜೊತೆಗೆ ಸ್ಥಳೀಯ ಬ್ರಾಹ್ಮಣ ಸಮಾಜ "ಬ್ರಾಹ್ಮಣನೊಬ್ಬನು ತನ್ನ ಮಗಳಿಗೆ ಹೀಗೆ ಮಾಡುತ್ತಾನೆನ್ನುವುದು ನಂಬಲಸಾಧ್ಯ" ಎಂದು ಹೇಳಿಕೆ ನೀಡಿದೆ ಅಲ್ಲದೆ ಪುರುಷನೊಬ್ಬ ತನ್ನ ಹೆಂಡತಿ ಮಕ್ಕಳೊಂದಿಗೆ ವ್ಯವಹರಿಸುವ "ಪ್ರೈವಸಿ" ನೀತಿ ಬಯಲಾಗಿರುವುದು ಅವರ ಕೆಂಗಣ್ಣಿಗೆ ಗುರಿಯಾಗಿದೆ.

ಇಷ್ಟಲ್ಲದೆ ಅಲ್ಲಿಯ ಜಿಲ್ಲಾಧಿಕಾರಿ ತಮ್ಮ ಟಿ.ವಿ. ಸಂದರ್ಶನದಲ್ಲಿ "ಇದು ಅಸಹ್ಯ ಹಾಗೂ ಮುಚ್ಚಿಡಬೇಕಾದ ವಿಚಾರ, ಇದು ಜನರ ಮುಂದೆ ಬಂದಿದೆ. ಇಂಥವುದನ್ನು ಆದಷ್ಟು ಬಹಿರಂಗಪಡಿಸದೇ ಇರುವುದು ಉಚಿತ ಇಲ್ಲವಾದರೆ ಈ ತರಹದ ಕಾಯಿಲೆ ಸಮಾಜಕ್ಕೆ ಹರಡಬಹುದು" ಎಂದಿದ್ದಾರೆ.

ಈಗ ಇಳಾಪಾಂಡೆ ಆಕೆಯ ಮಗಳು, ಸಹಕರಿಸಿದ ಕಾರ್ಯಕರ್ತರು ಬೇರೆ ಬೇರೆ ಭಾಗಗಳಿಂದ ಜನರನ್ನು ಎದುರಿಸುವ ಸ್ಥಿತಿ ಬಂದಿದೆ. ಈ ಪರಿಸ್ಥಿತಿಯಲ್ಲಿ ನಮ್ಮೆಲ್ಲರ ಮಾನವತೆಯ ಪರ ಎಲ್ಲಾ ವಿಧದ ದೌರ್ಜನ್ಯದ ವಿರುದ್ಧ ಸಿಡಿದೇಳುವ ನಮ್ಮೆಲ್ಲರ ಮಾನಸಿಕ ಸಹಕಾರದ ಅವಶ್ಯಕತೆ ಇವರಿಗಿದೆ. ಇದೇ ಹಂತದಲ್ಲಿ ನಾವು.

1) ಕಾರ್ಯಕರ್ತರ ಬಗ್ಗೆ ಸಲ್ಲದ FIR ಹೊರಿಸಿರುವುದನ್ನು ತೆಗೆದುಹಾಕಲು ಹಾಗೂ ಅವರಿಗೆ ರಕ್ಷಣೆ ಕೊಡಲು.

2) ಪೊಲೀಸರ ಪರಿಶೀಲನೆ ಜಾಗ್ರತೆಯಾಗಿ ಮುಗಿಸಲು.

3) ಜಗದೀಶ್ ಪಾಂಡೆಯನ್ನು ಅವನೆಸಗಿದ ಕೃತ್ಯಗಳನ್ನು ಎದುರಿಸಲು ಮತ್ತೊಮ್ಮೆ ಬಂಧಿಸಿ.

ಎಂದು ಒತ್ತಾಯಿಸಿ ನಾವು, ನೀವು, ಇರುವಲ್ಲಿಂದಲೇ ಒಂದು ಪತ್ರಬರೆದು, ಇದರ ಬಗ್ಗೆ ಪ್ರಚಾರ ಮಾಡಿ ಉಳಿದವರಿಗೂ ತಿಳಿಸಿ, ಸಹಿ ಪಡೆದು ಉತ್ತರ ಪ್ರದೇಶದ ಮುಖ್ಯಮಂತ್ರಿಗಳಿಗೆ ಕಳಿಸೋಣ. ಆ ಮೂಲಕ ನಾವು ಅವರೊಂದಿಗಿರಬಹುದಲ್ಲವೇ?

ಮುಖ್ಯಮಂತ್ರಿ
ಉತ್ತರ ಪ್ರದೇಶ
ಬಾಪೂ ಭವನ
ಲಕ್ನೋ-226 001

ಅಥವಾ

ಮುಖ್ಯ ಕಾರ್ಯದರ್ಶಿ
ಬಾಪೂ ಭವನ
ಉತ್ತರ ಪ್ರದೇಶ
ಲಕ್ನೋ-226 001

ಆಂಧ್ರ

ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಮೂಲ ಸಮುದ್ರಮ್ ಗ್ರಾಮದಲ್ಲಿ ಕೊಳವೆ ಬಾವಿ ನೀರು ಉಪಯೋಗಿಸಿದ್ದಕ್ಕಾಗಿ ದಲಿತ ಮಹಿಳೆ ಗಂಗರತ್ನಮ್ಮನನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿ, ಆಕೆಯ ಮನೆಯವರನ್ನು ಥಳಿಸಲಾಗಿದೆ. ಬಯಲಿಗೆ ಬಾರದ ಲಕ್ಷಾಂತರ ಅಸ್ಪೃಶ್ಯತೆಯ ಆಚರಣೆ, ಅಮಾನವೀಯ ಕೃತ್ಯಗಳಲ್ಲಿ ಬಹಿರಂಗಗೊಂಡ ಪ್ರಕರಣ ಇದು.

ಜಾತಿವಾದಿಗಳು ದಲಿತ ಮಹಿಳೆಯನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡುವ ಮೂಲಕ ಭಾರತದ ಸಂವಿಧಾನದ 17ನೇ ಪರಿಚ್ಛೇದವನ್ನು ಅಣಕಿಸಿದಂತಾಗಿದೆ.

ಸಂವಿಧಾನ ಜಾರಿಗೊಂಡು 50 ವರ್ಷಗಳಾಗುತ್ತಾ ಬಂದರೂ ಅಸ್ಪೃಶ್ಯತೆಯ ಆಚರಣೆ ನಿಂತಿಲ್ಲ. ಕಾರಣ ಅಸ್ಪೃಶ್ಯತೆಯ ಆಚರಣೆ ಇಲ್ಲವೇ ಇಲ್ಲ ಎಂದು ಸಾರುವ ಕುರುಡು ಸರ್ಕಾರ, ಅಧಿಕಾರಿಗಳು, ಹಾಗೂ ಮತೀಯ ಗುಂಪಿನ ಅಹಂಕಾರ, ಸಮಸ್ತ ನಾಗರೀಕರೆಲ್ಲರ ಹೇರಿಕೆಯ ಮೌನ ಇಂಥಹ ಪ್ರಕರಣಗಳಿಗೆ ಹೇಳಿಮಾಡಿಸಿದಂತಿದೆ.

"ಇದು ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆ" ಹಾಗೆಯೇ ಕುಡಿಯುವ ನೀರು ಹಿಡಿಯುವ ವಿಚಾರದಲ್ಲಿ ದಲಿತ ಮಹಿಳೆ ಹಾಗೂ ಸವರ್ಣೀಯ ಮಹಿಳೆಯ ನಡುವೆ ನಡೆದ ಜಗಳ ದಾಖಲು ಮಾಡಲು ಹೊರಟ ಬಚ್ಚಪ್ಪ, ರಾಮಚಂದ್ರ ಹಾಗೂ ಇತರರು ಹೊಸಕೋಟೆಯಲ್ಲಿ ಸವರ್ಣೀಯ ಪುರುಷರ ಹಲ್ಲೆಗೊಳಗಾಗಿ ಆಸ್ಪತ್ರೆ ಸೇರಿರುವುದು ನಾವೆಂಥಹ ಸಂಕಟದಲ್ಲಿದ್ದೇವೆಂದು ಸಾರುತ್ತಿದೆ.

ಇಂಥಹ ಪ್ರಕರಣಗಳು ಒಂದಿಲ್ಲೊಂದು ಕಡೆ ದಿನನಿತ್ಯ ನಡೆಯುತ್ತಿದ್ದರೂ, ಏನೂ ಮಾಡಲಾರದ ಅಸಹಾಯಕ ಪರಿಸ್ಥಿತಿಯಿಂದ ದೂರ ಬಂದು ಬೆಳಕಿಗೆ ಬಂದ ಪ್ರಕರಣಗಳನ್ನು ಗಟ್ಟಿಯಾಗಿ ಹಿಡಿದು ತಪ್ಪಿತಸ್ಥರಿಗೆ ಶಿಕ್ಷಿಸಿ ಮನುಷ್ಯತ್ವ ಬೆಳೆಸಬೇಕಾದುದು ರಾಷ್ಟ್ರದ ಸಮಸ್ತ ನಾಗರೀಕರ ಕರ್ತವ್ಯ ವಾಗಬೇಕೇ ವಿನಃ ನಾಲಿಗೆ ತುದಿಯ ಔದಾರ್ಯವಾಗಬಾರದು.

ನಾಚಿಕೆಗೇಡಿನ ಸಂಗತಿಯೆಂದರೆ ದಲಿತರು, ದಲಿತ ಮಹಿಳೆಯರು, ಮಕ್ಕಳು ಹೀಗೆ ದೌರ್ಜನ್ಯಕ್ಕೆ ಒಳಗಾದಾಗ ಎಲ್ಲೋ ಒಬ್ಬಿಬ್ಬ ಬುದ್ಧಿಜೀವಿ, ಒಂದೆರಡು ಸಂಘಟನೆ ಬಿಟ್ಟರೇ ಉಳಿದಂತೆ ಇದು ನಮಗೆ ಸಂಬಂಧಿಸಿದ ವಿಷಯವಲ್ಲ ಎಂಬಂತೆ ವರ್ತಿಸುವ ಪ್ರಗತಿಪರ ಸಂಘಟನೆಗಳು, ಬುದ್ಧಿಜೀವಿಗಳು, ಮಹಿಳೆಯರ ಸಂಘ, ಹಕ್ಕಿಗಾಗಿ ಹೋರಾಡುವವರು, ಮಾನವ ಹಕ್ಕುಗಳಿಗೆ ಸ್ಪಂಧಿಸುವ ಜನ ಕಣ್ಣು ಮುಚ್ಚಿ ಕುಳಿತಿದ್ದು ಕಡೆಗೂ ದಲಿತ ಸಂಘಟನೆಗಳೇ ಇದನ್ನು ಖಂಡಿಸಬೇಕಾಗಿ ಬಂದದ್ದು ಅನಿವಾರ್ಯವೇ!?

ಬಿಹಾರ

ಬಿಹಾರದ ಚಾಪ್ರಾದಲ್ಲಿ, ಕ್ರಿಶ್ಚಿಯನ್ ಸನ್ಯಾಸಿನಿ ಯೋರ್ವಳನ್ನು ಅಪರಿಚಿತ ವ್ಯಕ್ತಿಗಳಿಬ್ಬರು ಆಕೆ ಅಂಚೆ ಕಚೇರಿಗೆ ತೆರಳಲು ಆಟೋರಿಕ್ಷಾ ಹತ್ತಿದಾಗ, ಆಕೆಯನ್ನು ಅಪಹರಿಸಿ ನಿರ್ಜನ ಪ್ರದೇಶಕ್ಕೆ ಒಯ್ದು, ವಿವಸ್ತ್ರಗೊಳಿಸಿ ಅತ್ಯಾಚಾರದ ಬೆದರಿಕೆ ಹಾಕಿದ್ದಲ್ಲದೆ ಬಲವಂತವಾಗಿ ಮೂತ್ರ ಕುಡಿಸಿದರೆಂಬ ಸುದ್ದಿ ದಂಗುಬಡಿಸಿದೆ. ಇಷ್ಟಲ್ಲದೆ ಈ ಘಟನೆಯನ್ನು ದಾಖಲಿಸುವಂತೆ ಪೊಲೀಸ್ ಠಾಣೆಗೆ ಹೋದರೆ ದಾಖಲಿಸಲು ನಿರಾಕರಿಸಿದರೆಂಬ ಸುದ್ದಿ ರಕ್ಷಕರೇ ಭಕ್ಷಕರೆಂಬುದನ್ನು ಖಚಿತ ಪಡಿಸಿದೆ. ಹಿರಿಯ ಪೊಲೀಸ್ ಅಧಿಕಾರಿಗಳ ಗಮನಕ್ಕೆ ಬಂದು ಒತ್ತಾಯ ಬಂದಾದ ಮೇಲೆ, ಈ ಘಟನೆ ದಾಖಲಾಗಿ ತನಿಖೆಗೆ ಆದೇಶ ಬಂದಿದೆ.

ಈ ಹಿಂದೆ ಮಧ್ಯಪ್ರದೇಶದ ಹೆಣ್ಣುಮಗಳ ಮೇಲೆ ಅತ್ಯಾಚಾರವಾದಾಗ ವಿ.ಎಚ್.ಪಿ. ನಾಯಕರೊಬ್ಬರು ಇಂಥ ಅತ್ಯಾಚಾರಗಳು ದೇಶಾಭಿಮಾನದ ಪ್ರತೀಕ ಎಂದು ಸಮರ್ಥಿಸಿ ಕೊಂಡಿದ್ದು ವಿಪರ್ಯಾಸ ಮತಾಂತರದ ಹುಯಿಲೆಬ್ಬಿಸಿ ಕ್ರಿಶ್ಚಿಯನ್ ಸಮುದಾಯದಲ್ಲಿ ಭಯಭೀತಿಯನ್ನು ಉಂಟು ಮಾಡುತ್ತಿರುವ ಈ ಘಟನೆಗಳಲ್ಲಿ ಕೇಸರಿ ಸಂಘಟನೆಗಳು ಇರುವುದು ವರದಿಯಾಗಿಲ್ಲವಾದರೂ ಈ ಕೃತ್ಯಗಳ ಹಿಂದಿನ ಮನೋಧರ್ಮ ಎಂಥಹುದು ಎಂಬುದು ಸ್ಪಷ್ಟವಾಗೇ ಇದೆ. ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ಕ್ರಿಶ್ಚಿಯನ್‌ರ ವಿರುದ್ಧ ನಡೆದ ದೌರ್ಜನ್ಯ ಪ್ರಕರಣಗಳು ಜಾಸ್ತಿಯಾಗಿರುವುದು ಎದ್ದುಕಾಣುತ್ತಿದೆ. ಇದು ಮತೀಯ ಸಂಘಟನೆಗಳು ಬಲಿತಿರುವ ಸಂಕೇತವೇ ಸರಿ. BJP ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಇಂಥಹ ಘಟನೆಗಳು ಮೇಲಿಂದ ಮೇಲೆ ಆಗಿರುವುದು ಬೆಳಕಿಗೆ ಬಂದಿವೆ. ಕೇಂದ್ರ ಹಾಗೂ ರಾಜ್ಯದಲ್ಲಿ ಯಾವುದೇ ಪಕ್ಷ ಅಧಿಕಾರದಲ್ಲಿರಲಿ ಮತೀಯ ಭಾವನೆಗಳಿಗೆ ಪುರಸ್ಕರಿಸದೆ ಸೌಹಾರ್ದ ಕಾಪಾಡಬೇಕಾದುದು ಅದರ ಧರ್ಮ. ಮಹಿಳಾ ಆಯೋಗ ಎಚ್ಚೆತ್ತು ಅದರ ಬಗ್ಗೆ ತನಿಖೆ ನಡೆಸಲು

ಮುಂದೆ ಬಂದಿರುವುದು ಸ್ವಾಗತಾರ್ಹ. ಈ ಹೇಯ ಘಟನೆಗೆ ಕಾರಣರಾದವರನ್ನು ತಕ್ಷಣ ಬಂಧನಕ್ಕೆ ಒಳಪಡಿಸಿ, ತಲ್ಲಣದಿಂದ ತತ್ತರಿಸುತ್ತಿರುವವರಿಗೆ ಧೈರ್ಯ ಕೊಡಬೇಕಾದುದು ಹಾಗೂ ಇಂಥಹ ಘಟನೆಗಳು ನಡೆಯದಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯವೂ ಆಗಬೇಕಾದ ಅವಶ್ಯಕತೆ ತೀವ್ರವಾಗಿದೆ.

ಕರ್ನಾಟಕ

ಸಂಯುಕ್ತ ಕರ್ನಾಟಕ ಪತ್ರಿಕಾ ಸಮೂಹದ ವ್ಯವಸ್ಥಾಪಕ ಸಂಪಾದಕ ಶಾಮರಾವ್ ನಿರಂತರವಾಗಿ ಪತ್ರಕರ್ತರು ಹಾಗೂ ಕೆಲಸಗಾರರ ಮೇಲೆ ದೌರ್ಜನ್ಯ ನಡೆಸುತ್ತಿರುವುದು ಆಗಾಗ್ಗೆ ಕೇಳಿಬರುತ್ತಿದ್ದರೂ ಇತ್ತೀಚೆಗೆ ವಿಶೇಷ ಕಿರುಕುಳಕ್ಕೆ ಬಲಿಯಾಗಿದ್ದು ಸಂಪಾದಕೀಯ ವರ್ಗಕ್ಕೆ ಸೇರಿದ್ದ ಶಾಂತಕುಮಾರಿ.

ಆ ದಿನ ಕರ್ತವ್ಯ ನಿರತರಾಗಿದ್ದ ಶಾಂತಕುಮಾರಿಯವರನ್ನು ಕರೆದು, ಆಕೆಯ ಸಹೋದ್ಯೋಗಿಗಳೊಂದಿಗೆ ಜಗಳವಾಡುತ್ತಿದ್ದಳೆಂಬ ಕ್ಷುಲ್ಲಕ ಕಾರಣವೊಡ್ಡಿ, ಏಕವಚನದಲ್ಲಿ ನಿಂದಿಸಿ ಅನೈತಿಕ ಸಂಬಂಧದ ಆರೋಪ ಹೊರಿಸಿ ಓರ್ವ ಕಿರಿಯ ಸಹೋದ್ಯೋಗಿಯಿಂದ ಆಕೆಯ ಕೆನ್ನೆಗೆ ಹೊಡೆಸಿದರಲ್ಲದೆ, ಏಟು ಜೋರಾಗಿ ಬೀಳಲಿಲ್ಲವೆಂದು ತಾವೇ ಇನ್ನೊಂದು ಕೆನ್ನೆಗೆ ಹೊಡೆದರು.

ಶಾಂತಕುಮಾರಿಯವರಿಗೆ ಮಾಡಿದ ಈ ಕೃತ್ಯ ಇಡೀ ನಾರಿ ಸಮೂಹಕ್ಕೆ ಮಾಡಿದ ಅಗೌರವ. ಇದನ್ನು ಖಂಡಿಸಿ ವಿವಿಧ ಜನ ಸಂಘಟನೆಗಳು ತಾ|| 27-9-99 ರಂದು ಬೆಳಗ್ಗೆ ಗಾಂಧಿ ಪ್ರತಿಮೆಯ ಬಳಿ ಧರಣಿ ನಡೆಸಿದರು. ಮಾನಸ ಕೂಡ ತಾನು ಅವರೊಂದಿಗಿದ್ದುದಲ್ಲದೆ ಈ ಘಟನೆಯನ್ನು ಖಂಡಿಸಿದೆ. ಕೆಲಸದಿಂದ ವಜಾ ಆದ ಇವರಿಗೆ ಪುನಃ ಕೆಲಸಕ್ಕೆ ತೆಗೆದುಕೊಳ್ಳುವುದಷ್ಟೇ ಅಲ್ಲದೆ ತಮ್ಮ ಹೇಯ ಕೃತ್ಯಕ್ಕಾಗಿ ಶಾಮರಾವ್ ಸಾರ್ವಜನಿಕವಾಗಿ ಕ್ಷಮಾಯಾಚನೆ ಮಾಡಲಿ, ಇದು ಇತರರಿಗೂ ಪಾಠವಾಗಲಿ.

ಸಂಗ್ರಹ : ಬಿ. ಎನ್. ಶಾರದ

ಬಡ ದೇಶಗಳ ೫.೮೫ ಲಕ್ಷ ಗರ್ಭಿಣಿಯರ ಸಾವು

ಪ್ರತಿ ವರ್ಷ ಬಡ ದೇಶಗಳ ಗರ್ಭಿಣಿಯರಲ್ಲಿ 5.85 ಲಕ್ಷ ಮಂದಿ ಸಾವನ್ನಪ್ಪಿದರೆ ಸುಮಾರು 70 ಲಕ್ಷ ಮಂದಿ ಹೆರಿಗೆ ಸಮಯದಲ್ಲಿ ಸೋಂಕು ರೋಗಕ್ಕೆ ತುತ್ತಾಗುತ್ತಾರೆ ಎಂದು ವಿಶ್ವಸಂಸ್ಥೆಯ ಜನಸಂಖ್ಯಾ ವರದಿ ಹೇಳಿದೆ.

ಅದೇ ವರದಿಯ ಪ್ರಕಾರ ಅಸುರಕ್ಷಿತ ಗರ್ಭಪಾತದಿಂದಾಗಿ 70,000 ಮಹಿಳೆಯರು ಸಾಯುತ್ತಿದ್ದಾರೆ.

✧ ✧ ✧

ದೇಶದಲ್ಲಿ ಚಿಕ್ಕ ವಯಸ್ಸಿನ ಗರ್ಭಿಣಿಯರ ಸಂಖ್ಯೆ ಹೆಚ್ಚಳ

ಭಾರತದಲ್ಲಿ 15-19ರ ವಯೋಮಾನದ ಗರ್ಭಿಣಿಯರ ಸಂಖ್ಯೆ ಹೆಚ್ಚುತ್ತಿದ್ದು ಸರಾಸರಿ ಒಂದು ಸಾವಿರ ಗರ್ಭಿಣಿ ಸ್ತ್ರೀಯರಲ್ಲಿ 112 ಮಂದಿ ಚಿಕ್ಕ ವಯಸ್ಸಿನ ಗರ್ಭಿಣಿಯರಿರುತ್ತಾರೆ ಎಂದು ವಿಶ್ವಸಂಸ್ಥೆ ಜನಸಂಖ್ಯಾ ನಿಧಿಯ ವರದಿ ತಿಳಿಸಿದೆ.

ಇದಕ್ಕೆ ಮಹಿಳೆಯರಲ್ಲಿನ ಅನಕ್ಷರತೆಯೇ ಕಾರಣವಾಗಿದ್ದು ಪಾಕಿಸ್ತಾನದೊಂದಿಗೆ ತುಲನೆ ಮಾಡಿದರೆ ಅಲ್ಲಿ ಮಹಿಳಾ ಅನಕ್ಷರಸ್ಥರ ಸಂಖ್ಯೆ ಅಧಿಕ. 15 ಮತ್ತು ಅದಕ್ಕೆ ಮೇಲ್ಪಟ್ಟ ವಯಸ್ಸಿನರ ಸಂಖ್ಯೆ ಪಾಕಿಸ್ತಾನದಲ್ಲಿ ಶೇ. 76 ರಷ್ಟಿದ್ದರೆ ಭಾರತದಲ್ಲಿ ಇದರ ಪ್ರಮಾಣ ಶೇ. 62ರಷ್ಟು ಎಂದು ಇಲ್ಲಿ ಬಿಡುಗಡೆ ಮಾಡಿರುವ ವರದಿ ತಿಳಿಸಿದೆ.

ವರದಿಯ ಪ್ರಕಾರ ದಕ್ಷಿಣ ಕೇಂದ್ರ ಏಷ್ಯಾದಲ್ಲೇ ಆರೋಗ್ಯಕ್ಕೆ ಬಂಡವಾಳ ತೊಡಗಿಸುವ ದೇಶಗಳಲ್ಲಿ ಭಾರತ ಹಿಂದುಳಿದಿದೆ.

ಉಸುಕಿನ ಪ್ರಿಯಕರ

ನಾನು ಗೋವೆಯ ಮರಳು ತೀರದ ಮೇಲೆ ಅಡ್ಡಾಡುತ್ತಿದ್ದೆ
ಅಲ್ಲಿದ್ದ ಬಿಳಿ ಕೊಕ್ಕರೆಗಳು
ಅವುಗಳ ಬೆನ್ನಿನ ಮೇಲೆ ನನ್ನ ಹೃದಯವನ್ನು
ಹಗುರಾಗಿ ಇಟ್ಟೆ: ನನಗೆ ನೆನಪಾಗುತ್ತಿದೆ
ನಾನು ನನ್ನ ಪ್ರಿಯಕರನ ಹೆಸರನ್ನು
ಅಲ್ಲಿಯ ಉಸುಕಿನ ಮೇಲೆ ಕೊರೆದಿಟ್ಟಿದ್ದೆ

ಕೆನೆಯುವ ಕುದುರೆಯಂತೆ ಸುರಿಯುವ
ಮಳೆ ಉಸುಕನ್ನು ಹಾಳು ಮಾಡಬಹುದೆಂದು
ನಾನು ಅತ್ತಿದ್ದೆ: ಮುದುಕಿ ಆಂಟಿಯ
ಗುಡಿಸಲು ಪ್ರವೇಶಿಸಿದರೆ ಆಂಟಿಯ
ಮಗ ಉಸುಕಿನಲ್ಲಿ ಅಂಗಾತ ಮಲಗಿದ್ದ

ಅವನ ಕೈಗಳು ಕ್ರೂಸ್‌ದಂತೆ ಕಾಣಿಸುತ್ತಿದ್ದವು
ಅವನ ಅರಿವೆ ಧ್ವಜದಂತೆ ಗಾಳಿಗೆ ಹಾರಾಡುತ್ತಿತ್ತು

ಆಂಟಿ ಅಲ್ಲೇ ನಿಂತಿದ್ದಾಳೆ
ನಿರ್ವಿಕಾರ ಮುಖದಲ್ಲಿ: ಅನೇಕ ಶತಮಾನಗಳಿಂದ
ನಿಂತಿರುವ ಚರ್ಚ್‌ದಂತೆ ಶಾಂತ

ಅವಳ ಈ ಸ್ತಬ್ದತೆ ನೋಡಿ ಪ್ರಾರ್ಥನೆ
ಪಕ್ಕದಲ್ಲೇ ಇರುವ ಬಾರಿಗೆ ನುಗ್ಗಿದವು

ಪ್ರಿಯಕರನ ತುಟಿಯ ಚುಂಬನ
ನೆನಪಿಸುತ್ತ ಮಳೆಯಲ್ಲಿ ನಾನೂ ನೆನೆಯುತ್ತಿರುವೆ

ಆಂಟಿಯ ಎದುರು ನಾನು ಉರಿಯುವ
ಮೇಣಬತ್ತಿಯಂತೆ ನಿಂತುಕೊಂಡೆ
ಬೈಬಲ್ ಓದುತ್ತಿರುವ ಅವಳು
ಜೀವಂತ ಸಮುದ್ರದಂತೆ ಉರಿಯುತ್ತಿದ್ದಾಳೆ

ನನ್ನ ಪ್ರಿಯಕರನ ಹೆಸರು
ಉಸುಕಿನಲ್ಲಿ ಉಳಿದಿದಿಯೋ ಇಲ್ಲವೋ
ಎಂದು ನಾನು ಹಿಂತಿರುಗಿಯೂ ನೋಡಲಿಲ್ಲ

ಈಗ ಗೋವೆಯ ಸಮುದ್ರಕ್ಕೆ
ತೀರವೇ ಇಲ್ಲ ಮತ್ತು

ಈಗ ನನ್ನ ಶರೀರದಿಂದ
ಒಬ್ಬ ಉಸುಕಿನ ಪ್ರಿಯಕರ
ನಿರ್ಮಾಣಗೊಂಡು ಕೆಳಗೆ

ಇಳಿದು
ಕಾಣೆಯಾಗುತ್ತಿದ್ದಾನೆ.

- ಮಲ್ಲಿಕಾ ಅಮರಶೇಖ್

ಬ್ರೆಜಿಲ್ ದೇಶದ ಸ್ಯಾವೊಪೋಲೊ ಎಂಬ ಪಟ್ಟಣದಲ್ಲಿ ಸ್ತ್ರೀಯರ ಮೇಲೆ ನಡೆದ ಅಪರಾಧಗಳಲ್ಲಿ ೮೧ ಭಾಗ ಅಪರಾಧಗಳು ಅವರ ಗಂಡಂದಿರು, ಸ್ನೇಹಿತರು, ಅಥವಾ ವಿಚ್ಛೇಧಿತ ಗಂಡಂದಿರಿಂದ ನಡೆಯುತ್ತದೆ.

❖ ❖ ❖

ಚೀನಾ ದೇಶದಲ್ಲಿ ಶೇ. 25%ರಷ್ಟು ಹೆಂಗಸರು ವಿಚ್ಛೇದನ ಪಡೆಯಲು ಕಾರಣ, ಮನೆಗಳಲ್ಲಿ ಗಂಡಂದಿರು ನೀಡುವ ಹಿಂಸೆ. ಫ್ರಾನ್ಸ್ ದೇಶದಲ್ಲಿ ಶೇ. ೫೧ರಷ್ಟು ಹೆಂಗಸರು ಗಂಡಂದಿರ ಕ್ರೂರ ಹಿಂಸೆಗೆ ಒಳಗಾಗಿದ್ದಾರೆ.

❖ ❖ ❖

ಭಾರತದಲ್ಲಿ ಹತ್ತು ಜನ ಹೆಂಗಸರು ಕೊಲೆಯಾಗಿದ್ದರೆ, ಅದರಲ್ಲಿ ಒಂಬತ್ತು ಜನ ಹೆಂಗಸರನ್ನು ಅವರ ಗಂಡಂದಿರು ಕೊಲೆ ಮಾಡಿರುತ್ತಾರೆ.

ದುಡಿಯುವ ಮಹಿಳೆಗೆ ಲೈಂಗಿಕ ಕಿರುಕುಳ

ದುಡಿಯುವ ಮಹಿಳೆಯರ ಲೈಂಗಿಕ ಶೋಷಣೆಯನ್ನು ತಡೆಗಟ್ಟುವ ಉದ್ದೇಶದಿಂದ ಇತ್ತೀಚೆಗೆ ಸುಪ್ರೀಂ ಕೋರ್ಟ್ ಆದೇಶವನ್ನು ನೀಡಿದುದು ಸರಿಯಷ್ಟೆ. ಸುಪ್ರೀಂ ಕೋರ್ಟ್ ನೀಡಿದ ಆದೇಶದಂತೆ ವಿವಿಧ ಕಾರ್ಖಾನೆ ಹಾಗೂ ಕಛೇರಿಗಳಲ್ಲಿ ದೂರು ಸಮಿತಿಗಳನ್ನು ರಚಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಹಲವಾರು ಮಹಿಳೆಯರು ಧೈರ್ಯವಾಗಿ ತಮ್ಮ ಮೇಲೆ ನಡೆಯುತ್ತಿರುವ ಲೈಂಗಿಕ ಕಿರುಕುಳವನ್ನು ಪ್ರತಿಭಟಿಸುತ್ತಿದ್ದಾರೆ.

ಭಾರತದ ಪ್ರವಾಸೋದ್ಯಮ ಇಲಾಖೆ ದೆಹಲಿಯಲ್ಲಿ ಹೋಟೆಲ್ ಕಾನಿಷ್ಕವನ್ನೂ ನಡೆಸುತ್ತಿದೆ. ಈ ಹೋಟೆಲ್‌ನಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕಳೊಬ್ಬಳು ತನ್ನ ಮೇಲೆ ಸತತವಾಗಿ ನಡೆಯುತ್ತಿರುವ ಲೈಂಗಿಕ ಅತ್ಯಾಚಾರದ ವಿರುದ್ಧ ದೂರು ನೀಡಿದ್ದಾರೆ. ೨೪ ವರ್ಷ ವಯಸ್ಸಿನ ಈ ಮಹಿಳೆ ಎರಡು ವರ್ಷಗಳಲ್ಲಿ ಇದೇ ಹೋಟೆಲ್ಲಿನಲ್ಲಿ ದುಡಿಯುತ್ತಿರುವ ಕಾರ್ಮಿಕರು ಈಕೆಯನ್ನು ಲೈಂಗಿಕವಾಗಿ ಹಿಂಸಿಸುತ್ತಾ ಬಂದಿದ್ದಾರಲ್ಲದೆ, ಇಬ್ಬರು ಕಾರ್ಮಿಕರು ಈಕೆಯ ಮೇಲೆ ಅತ್ಯಾಚಾರವೆಸಗಿದ್ದಾರೆಂದು ಆಡಳಿತ ವರ್ಗಕ್ಕೆ ದೂರು ನೀಡಲಾಗಿದೆ.

ಜವಾಹರ್ ಗಾದಿಹೋಕ್ ಹೋಟೆಲಿನ ಜನರಲ್ ಮ್ಯಾನೇಜರ್ "ಆರೋಪಿಯನ್ನು ಕೆಲಸದಿಂದ ತೆಗೆದುಹಾಕಲಾಗಿದೆಯಲ್ಲದೆ, ಆಕೆ ನೀಡಿದ ದೂರನ್ನು ಪೊಲೀಸರಿಗೆ ವರ್ಗಾವಣೆ ಮಾಡಲಾಗಿದೆ ಎಂದು ಒಪ್ಪಿಕೊಳ್ಳುತ್ತಾರೆ. ವಿಚಾರಣೆಯ ವರದಿ ಬಂದ ನಂತರ ಅಗತ್ಯವಾದ ಕ್ರಮವನ್ನು ತೆಗೆದುಕೊಳ್ಳುವುದಾಗಿ ಭರವಸೆ ನೀಡುತ್ತಾರೆ.

೧೯೯೬ರಲ್ಲಿ ಈಕೆ ತಾತ್ಕಾಲಿಕ ನೌಕರಳಾಗಿ ಕೆಲಸಕ್ಕೆ ಸೇರಿದಳು. ಕಾಫಿ ನೀಡುವ ಕೆಲಸ ಇವಳದಾಗಿತ್ತು. ಆದರೆ ಕಾಫಿ ಕೊಡುವುದಲ್ಲದೆ, ಪಾತ್ರೆಗಳನ್ನು ಒತ್ತಾಯಪೂರ್ವಕವಾಗಿ ತೊಳೆಸಲಾಗುತ್ತಿತ್ತು. ಅಸಹ್ಯವಾದ ಮಾತುಗಳಿಂದ ಅವಳನ್ನು ಹಿಂಸಿಸಲಾಗುತ್ತಿತ್ತು. ಈ ಕುರಿತು ಈಕೆ ಆಡಳಿತ ವರ್ಗಕ್ಕೆ ದೂರು ನೀಡಿದಳು.

೧೯೯೬ ಅಕ್ಟೋಬರ್‌ನಲ್ಲಿ ಕಾರ್ಮಿಕನೊಬ್ಬ ಅವಳನ್ನು ಲೈಂಗಿಕವಾಗಿ ಹಿಂಸಿಸುತ್ತಿದ್ದುದರ ವಿರುದ್ಧ ಈಕೆ ಆಡಳಿತ ವರ್ಗಕ್ಕೆ ದೂರು ನೀಡಿದ್ದಳು. ಆದರೆ ಆಡಳಿತ ವರ್ಗ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ.

ಜನವರಿ ೧೯೯೭ರಲ್ಲಿ ಅವಳನ್ನು ಅದೇ ಹೋಟೆಲ್ಲಿನ ಬೇರೆ ವಿಭಾಗಕ್ಕೆ ವರ್ಗಾವಣೆ ಮಾಡಲಾಯಿತು. ಅಲ್ಲಿರುವ ಕೆಲಸಗಾರರು ಅವಳನ್ನು ಪುನಃ ಈ ರೀತಿಯ ಹಿಂಸೆಗೆ ಗುರಿಮಾಡತೊಡಗಿದರು. ಯಾವುದೋ ನೆಪದಲ್ಲಿ ಅವಳನ್ನು ಬೇರೊಬ್ಬರ ಮನೆಗೆ ಕರೆದುಕೊಂಡು ಹೋಗಿ ಅವಳ ಮೇಲೆ ಅತ್ಯಾಚಾರ ಎಸಗಲಾಯಿತು. ಈ ವಿಷಯವನ್ನು ಬೇರೆಯವರಿಗೆ ತಿಳಿಸದಿರುವಂತೆ ಹೆದರಿಸಲಾಯಿತು. ಬುಡಕಟ್ಟು ಜನಾಂಗಕ್ಕೆ ಸೇರಿದ ಈಕೆಗೆ ದೆಹಲಿಯಲ್ಲಿ ಯಾರ ಬೆಂಬಲ ಹಾಗೂ ಆರ್ಥಿಕ ನೆರವು ಇಲ್ಲದಿರುವುದರಿಂದ ಹೆದರಿ ಸುಮ್ಮನಾಗಬೇಕಾಯಿತು. ಆಡಳಿತ ವರ್ಗವೂ ಆಕೆಯ ನೆರವಿಗೆ ಬರಲಿಲ್ಲ. ಇಬ್ಬರು ಕಾರ್ಮಿಕರು ಅವಳನ್ನು ಸತತವಾಗಿ ಬೆದರಿಸಿ, ಲೈಂಗಿಕವಾಗಿ ಅವಳನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಅವರಲ್ಲಿ ಒಬ್ಬ ಅವಳನ್ನು ಮದುವೆಯಾಗುತ್ತೇನೆಂದು ಅವಳಿಗೆ ಮಾತುಕೊಟ್ಟಿದ್ದ. ಆಕೆ ಗರ್ಭಿಣಿಯಾಗಿದ್ದಾಗ ಅವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಗರ್ಭಪಾತಮಾಡಿಸಿದ. ಇದೇ ರೀತಿಯ ಕಿರುಕುಳ ನಡೆಯುತ್ತಲೇ ಇತ್ತು.

ಲೈಂಗಿಕ ಕಿರುಕುಳವನ್ನು ಪರಿಶೀಲಿಸಲು ಆಡಳಿತ ವರ್ಗ ರಚಿಸಿರುವ ಸಮಿತಿಯನ್ನು ಈಕೆ ಭೇಟಿ ಮಾಡಿದ್ದಳು. ಅವಳ ಮೇಲೆ ಹಾಕಲಾದ ಒತ್ತಡದಿಂದ ಆಕೆ ತಾನು ನೀಡಿದ ದೂರನ್ನು ವಾಪಸ್ಸು ಪಡೆದಿದ್ದಳು. ಆದರೆ ಸಮಿತಿಯ ಸದಸ್ಯರೊಬ್ಬರು ನೀಡಿದ ಸಲಹೆಯಂತೆ, ಪುನಃ ದೂರನ್ನು ನೀಡಿದ್ದಳು. "ಕೆಲಸಗಾರರು ನನ್ನನ್ನು ಲೈಂಗಿಕವಾಗಿ ಉಪಯೋಗಿಸಿಕೊಳ್ಳುವ ಗೊಂಬೆ ಮಾಡಿಕೊಂಡಿದ್ದಾರೆ. ನನ್ನ ದೂರನ್ನು ದಾಖಲು ಮಾಡಿಕೊಂಡು ನನಗೆ ಸೂಕ್ತ ರಕ್ಷಣೆ ನೀಡುವ ಸ್ಥಳವನ್ನು ವ್ಯವಸ್ಥೆ ಮಾಡಿಕೊಡಬೇಕೆಂದು" ಕೋರಿದ್ದಾಳೆ.

●

ಸಂಭಾವಿತ ಸೂರ್ಯನಂತೆ

ಸಂಭಾವಿತ ಸೂರ್ಯನಂತೆ ನೀವು
ಯಾವಾಗಲೂ ನಿರ್ಲಿಪ್ತರಾಗಿರುತ್ತೀರಿ
ಪ್ರತಿನಿತ್ಯ ಬೆನ್ನು ತಿರುಗಿಸಿ ನಡೆದು ಬಿಡುತ್ತೀರಿ

ನಿಮ್ಮ ವಿಚಾರಗಳು ಭರಣಿಯಲ್ಲಿ ಮುಚ್ಚಿಟ್ಟ ಉಪ್ಪಿನಕಾಯಿಯಂತೆ
ಇಡೀ ಪಂಚತಂತ್ರವೇ ನಿಮ್ಮ ತುದಿ ನಾಲಿಗೆಯ ಮೇಲೆ

ನೀವು ಯಾವುದೇ ಆಟ
ಗೆಲ್ಲಲೆಂದೇ ಆಡುತ್ತೀರಿ

ನಿಮ್ಮ ಲಂಪಟ ಶಬ್ದಗಳು ನಮ್ಮ ಜೀವನದ
ಪ್ರತಿ ಹಂತವನ್ನು ಅಣಕಿಸುತ್ತಿರುತ್ತವೆ

ನಿಮ್ಮ ಹಣದ ಥೈಲಿ ನಮ್ಮ
ಜೀವನವನ್ನು ನಿಯಂತ್ರಿಸುತ್ತಿರುತ್ತವೆ

ನಿಮ್ಮ ಮನೆಗಳೆದುರು ಉಚ್ಚ
ಉದಾರ ವಿಚಾರಗಳ ರಂಗೋಲಿ ಹಾಕಿರುತ್ತವೆ
ಮನುಷ್ಯತ್ವದ ಬಗ್ಗೆ ಸಿಗರೇಟು ಸೇದಿದಂತೆ
ನೀವು ಮಾತನಾಡುತ್ತೀರಿ

ಅಸಹಾಯಕ ನಾವು ನಿಮ್ಮ ಈ ನಾಟಕವನ್ನು
ನಿರ್ವಿಕಾರ ಮನಸ್ಸಿನಿಂದಲೇ ನೋಡುತ್ತಿರುತ್ತೇವೆ
ಅದೆಷ್ಟೋ ಸಲ ಯಾಕೆ ಈ ರೀತಿಯ ಜೀವನವೆಂದು
ಚಡಪಡಿಸುತ್ತಿರುತ್ತೇವೆ

ನಗರಗಳ ಕೂಟ ಕೂಟಗಳಲ್ಲಿರುವ ಕಾರಂಜಿಗಳಿಂದ
ನೀರಿನ ಬದಲು ರಕ್ತವೇಕೆ
ಚಿಮ್ಮುವುದಿಲ್ಲವೆಂದು ಕೋಪ ಬರುತ್ತದೆ

ಅದೆಷ್ಟು ದಿನ ಅದೆಷ್ಟು ಕಾಲ ಬಲಿಗೆ
ಹೋಗುವ ಮೇಕೆಯ ನಿಸ್ತೇಜ ಕಣ್ಣುಗಳನ್ನು
ನೋಡುತ್ತ ಸುಮ್ಮನೇ ನಿಂತಿರುವುದು?

ಪ್ರತಿಯೊಬ್ಬ ತನ್ನ ಗೋರಿಯನ್ನು ಒಡೆದು
ಅದೇಕೆ ಹೊರಬರುವುದಿಲ್ಲ?

ಮರುಭೂಮಿಯಂತಹ ಈ ನಗರದಲ್ಲಿ
ರಕ್ತ ಲೇಪಿತ ಗುಲಮೊಹರ್‌ಗಳು: ಗಟಾರಿನ
ಪಕ್ಕದ ಕಿಡಕಿಗಳಲ್ಲಿ ಸೂಳೆಯರಾಗಿ
ಕುಳಿತ ಹುಣ್ಣಿಮೆಯ ರಾತ್ರಿ

ನನಗೆ ಇದೆಲ್ಲ ನೋಡುವುದು ಬೇಕಿಲ್ಲ
ನನಗೆ ಇದನ್ನೆಲ್ಲ ಅಂತ್ಯಗೊಳ್ಳಿಸಬೇಕಾಗಿದೆ

ಹೀಗೆ ಕಣ್ಣು ಮುಚ್ಚಿ ಕುಳಿತರೆ ಏನಾದರೂ ಆಗಬಹುದೇ?
ಇಲ್ಲಿಯ ಪ್ರತಿಯೊಬ್ಬ ಹುಡುಗನ ಕಣ್ಣಿನಲ್ಲಿರುವ ಭವಿಷ್ಯ
ಇಲ್ಲಿಯ ಪ್ರತಿಯೊಬ್ಬ ತಾಯಿಯ ಮುಖದಲ್ಲಿರುವ ಭೂತ

ಇದೆಲ್ಲ ನೋಡುತ್ತಿರುವಾಗ ನನ್ನ ಕಣ್ಣುಗಳು
ಮೇಣದ ಬತ್ತಿಹಾಗೆ ಉರಿಯಲಾರಂಭಿಸುತ್ತವೆ

ನೋವು ಅಶ್ವತ್ಥಾಮನಂತೆ ಚಿರಂಜೀವಿಯಾಗಿ
ಅಂಡಲೆಯಲಾರಂಭಿಸುತ್ತದೆ.

- ಮಲ್ಲಿಕಾ ಅಮರ್‌ಶೇಖ್

ಮಲ್ಲಿಕಾ ಅಮರಶೇಖ್ (1956) ಮಹಾರಾಷ್ಟ್ರದ ಸುಪ್ರಸಿದ್ಧ ಜಾನಪದ ಹಾಡುಗಾರ ಶಾಹೀರ್ ಅಮರ್ ಶೇಖ್‌ರ ಮಗಳು; ಪ್ರಸಿದ್ಧ ದಲಿತ ಕವಿ ನಾಮದೇವ ಢಸಾಳರ ಪತ್ನಿ. ಸಾಹಿತ್ಯ, ಸಂಗೀತ, ನೃತ್ಯಗಳಲ್ಲಿ ಪರಿಣತಿ ಪಡೆದ ಮಲ್ಲಿಕಾ, 15ನೇ ವರ್ಷದಲ್ಲೇ ಮಹಾರಾಷ್ಟ್ರದ 'ಸರ್ವೋತ್ಕೃಷ್ಟ ಬಾಲಕವಯಿತ್ರಿ' ಪ್ರಶಸ್ತಿ ಪಡೆದ ಪ್ರತಿಭಾವಂತೆ

'ವಾಳೂಚಾ ಪ್ರಿಯಕರ', 'ಮಹಾನಗರ' ಮತ್ತು 'ನಂತರ' ಕವನ ಸಂಕಲಗಳನ್ನು, ಅನೇಕ ಲೇಖನ-ಕಥೆಗಳನ್ನು, 'ಏಕ್ ನ ಸಂಪಣಾರಿ ಗೋಷ್ಟ' ಲಘು ಕಾದಂಬರಿಯನ್ನು ಬರೆದಿರುವ ಮಲ್ಲಿಕಾರ ಆತ್ಮಚರಿತ್ರೆ 'ಮಲಾ ಉಧ್ವಸ್ಥ ವ್ಹಾಯಚಯ್' ಭಾರಿ ಚರ್ಚೆ, ವಾದ-ವಿವಾದ ಸೃಷ್ಟಿಸಿದ ಕೃತಿ.

ಮಲ್ಲಿಕಾ ಅಮರಶೇಖರ ಇಲ್ಲಿನ ಕವನಗಳನ್ನು 'ಮರಾಠಿ ದಲಿತ ಕಾವ್ಯ' (1999) ಕೃತಿಯಿಂದ ಆಯ್ದುಕೊಳ್ಳಲಾಗಿದೆ

ಅನುವಾದಕರು : ಲೋಹಿಯಾ ಪ್ರಕಾಶನ 'ಕ್ಷಿತಿಜ', ಕಪ್ಪಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ - 583 103
ಪುಟಗಳು : 38+125; ಬೆಲೆ : ರೂ. 75/-

ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆ

- ಪಿ. ಬಿ. ರಾಥೋಡ್

ಜಗತ್ತಿನಾದ್ಯಂತ 20ನೆಯ ಶತಮಾನದ ಅಂತ್ಯದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯದಲ್ಲಿ ಭಾಗವಹಿಸುತ್ತಿರುವುದನ್ನು ಕಾಣಬಹುದು. ಈ ಶತಮಾನದಲ್ಲಿ 32 ಜನ ಮಹಿಳೆಯರು ಪ್ರಧಾನಿಗಳಾಗಿಯೋ, ಅಥವಾ ಅಧ್ಯಕ್ಷಣಿಯರಾಗಿಯೋ ಸೇವೆ ಸಲ್ಲಿಸಿದ್ದಾರೆ. 1990ರ ದಶಕದಲ್ಲಿ 24 ಜನ ಮಹಿಳೆಯರು ಅಧಿಕಾರರೂಢರಾಗಿದ್ದರು. ಇಂಟರ್ ಪಾರ್ಲಿಮೆಂಟರಿ ವರದಿಯ ಪ್ರಕಾರ ಕೇವಲ 8 ರಾಷ್ಟ್ರಗಳಲ್ಲಿ ಮಾತ್ರ ಮಹಿಳೆಯರು ಶಾಸಕಿಯರಾಗಿದ್ದರು. ಈ ಶತಮಾನದಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿದ ಮಹಿಳೆಯರ ಸಂಖ್ಯೆ ಇಮ್ಮಡಿಯಾಯಿತು. 1987ರಲ್ಲಿ 3.7ರಷ್ಟಿದ್ದ ಮಹಿಳೆಯರ ಸಂಖ್ಯೆ 1996ರಲ್ಲಿ 6.8ಕ್ಕೆ ಮುಟ್ಟಿತ್ತು. ಮಹಿಳೆಯರು ಇಲ್ಲದೆ ಕೆಲಸ ಮಾಡಿದ ಮಂತ್ರಿ ಮಂಡಳ ಸಂಖ್ಯೆಯು 93ರಿಂದ 48ಕ್ಕೆ ಇಳಿಯಿತು. ಶೇ. 20ಕ್ಕಿಂತ ಹೆಚ್ಚು ಮಹಿಳೆಯರು ಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ.

ಈ ಪ್ರಗತಿಯು ಗಣನೀಯವಾದುದೆಂದು ಒಪ್ಪಬೇಕಾಗಿದ್ದರೂ, ಇದು ತೃಪ್ತಿಕರವಾದುದಲ್ಲ. ರಾಷ್ಟ್ರೀಯ ರಾಜಕಾರಣದಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಮೇಲೆ ಪರಿಣಾಮ ಬೀರುವ ಅಂಶಗಳು ಚರ್ಚಾಸ್ಪದ ಸಂಗತಿಗಳೇ ಆಗಿವೆ. ರಾಜಕಾರಣದಲ್ಲಿ ಮಹಿಳೆಯರ ಪ್ರಾತಿನಿಧ್ಯದಲ್ಲಿ ವ್ಯತ್ಯಾಸಗಳು ಕಂಡುಬರಲು ಸಂಕೀರ್ಣವಾದ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಹಾಗೂ ಸಾಂಸ್ಥಿಕ ಅಂಶಗಳು ಕಾರಣವಾಗಿವೆ. ರಾಜಕಾರಣದಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯಿಂದ ತೀವ್ರಗೊಳ್ಳುತ್ತದೆಯೆಂಬ ಅಂಶವನ್ನು ಅಭಿವೃದ್ಧಿ ಹೊಂದಿದ ದೇಶಗಳ ನಿದರ್ಶನಗಳಿಂದ ನೋಡಬಹುದು. ಇಂತಹ ದೇಶಗಳಲ್ಲಿ ಹಿಂದುಳಿದ ದೇಶಗಳಿಗಿಂತ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು ಶಾಸಕಿಯರಾಗಿದ್ದಾರೆ. ಆದರೆ ಎಲ್ಲಾ ಅಭಿವೃದ್ಧಿಶೀಲ ರಾಷ್ಟ್ರಗಳಿಗೂ ಈ ವಾದ ಅನ್ವಯ ವಾಗುವುದಿಲ್ಲ. ಕೆಲವೊಮ್ಮೆ ಅಭಿವೃದ್ಧಿಶೀಲ ದೇಶಗಳಿಗಿಂತ ಹಿಂದುಳಿದ ದೇಶಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಶಾಸಕಿಯರಾಗಿ ಆಯ್ಕೆಯಾಗಿರುವುದು ಕಂಡುಬರುತ್ತದೆ.

ಆರ್ಥಿಕ ಚಟುವಟಿಕೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಅವರ ರಾಜಕೀಯ ಭಾಗವಹಿಸುವಿಕೆಯ ಮೇಲೆ ಪೂರಕವಾದ ಪರಿಣಾಮವನ್ನೂ ಬೀರುತ್ತಿರುವುದು ಕಂಡುಬರುತ್ತಿದೆ. ಏಷಿಯಾ ಫೆಸಿಫಿಕ್ ವಲಯದಲ್ಲಿ ಶೇ. 70ಕ್ಕೂ ಹೆಚ್ಚು ಮಹಿಳೆಯರು ಆರ್ಥಿಕ ಚಟುವಟಿಕೆಯಲ್ಲಿ ಭಾಗವಹಿಸುತ್ತಿರುವುದು ಕಂಡುಬರುತ್ತಿದೆ. ಆದರೆ ಈ ದೇಶಗಳಲ್ಲಿ ಕೇವಲ 3 ದೇಶಗಳಲ್ಲಿ ಮಾತ್ರ ಶೇ. 10ಕ್ಕಿಂತ ಹೆಚ್ಚು ಮಹಿಳೆಯರೇ ಶಾಸಕಿಯರಾಗಿದ್ದಾರೆ.

ಸ್ತ್ರೀಯರು ರಾಜಕೀಯದಲ್ಲಿ ಕಡಿಮೆ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದಕ್ಕೆ ಅನಕ್ಷರತೆಯನ್ನು ಒಂದು ಕಾರಣವೆಂದು ಹೇಳಲಾಗುತ್ತಿದೆ. ಆದರೆ ಅಭಿವೃದ್ಧಿಶೀಲ ದೇಶಗಳಲ್ಲಿ, ಮಹಿಳೆಯರು ಹೆಚ್ಚು ಅಕ್ಷರಸ್ಥರಾಗಿರುವ ದೇಶಗಳಲ್ಲಿ, ಅಷ್ಟೇ ಪ್ರಮಾಣದಲ್ಲಿ ಮಹಿಳೆಯರು ರಾಜಕೀಯದಲ್ಲಿ ಯಶಸ್ವಿಯಾಗುತ್ತಿರುವುದು ಕಂಡುಬರುತ್ತಿಲ್ಲ. ಈ 46 ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅನಕ್ಷರಸ್ಥರ ಸಂಖ್ಯೆ ಕಡಿಮೆಯಿದ್ದರೂ, ಮಹಿಳಾ ಶಾಸಕಿಯರ ಸಂಖ್ಯೆ ಕೇವಲ ಶೇ. 10ರಷ್ಟು ಕಂಡುಬರುತ್ತಿದೆ.

ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಮೇಲೆ ರಾಜಕೀಯ ವ್ಯವಸ್ಥೆಯು ಪರಿಣಾಮ ಬೀರುವುದೆಂಬ ವಾದವನ್ನು ಮುಂದಿಡಲಾಗುತ್ತದೆ. ನಿರಂಕುಶ ಪ್ರಭುತ್ವಕ್ಕಿಂತ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೆಚ್ಚು ಮಹಿಳೆಯರು ರಾಜಕಾರಣವನ್ನು ಪ್ರವೇಶಿಸುತ್ತಾರೆಂಬ ವಾದವನ್ನು ಸಹ ಮುಂದಿಡಲಾಗುತ್ತಿದೆ. ಆದರೆ ಇದು ಕೇವಲ ನಾರ್ಡಿಕ್ ದೇಶಗಳಾಗಿ ಮಾತ್ರ ಅನ್ವಯವಾಗುತ್ತದೆ. ಇಲ್ಲಿ ಶೇ. 37.6ರಷ್ಟು ಮಹಿಳೆಯರು ಶಾಸಕಿಯರು, ಆದರೆ ಬಹುಪಾಲು ಪ್ರಜಾಪ್ರಭುತ್ವ ಇರುವ ದೇಶಗಳಲ್ಲಿ ಕೇವಲ ಶೇ. 20ರಷ್ಟು ಮಹಿಳೆಯರು ಶಾಸಕಿಯರಾಗಿದ್ದಾರೆ.

ಕಮ್ಯೂನಿಸ್ಟ್ ದೇಶಗಳಾದ, ಕ್ಯೂಬ, ವಿಯೆಟ್ನಾಂ, ಚೈನಾ, ಉತ್ತರ ಕೊರಿಯಾ ದೇಶಗಳಲ್ಲಿ ಶೇ. 20ರಿಂದ 30ರಷ್ಟು ಮಹಿಳೆಯರು ಶಾಸಕಿಯರಾಗಿದ್ದಾರೆ. ಪೂರ್ವಭಾಗದ ಹೊಸ ರಾಜ್ಯಗಳಲ್ಲಿ, ಕಮ್ಯೂನಿಸ್ಟ್ ಆಡಳಿತದಲ್ಲಿ ಇದ್ದ ಮಹಿಳೆಯರ ಭಾಗವಹಿಸುವಿಕೆಯು ಇಂದು ಶೇ. 8ರಿಂದ 15ಕ್ಕೆ ಇಳಿದಿದೆ.

ಒಂದು ದೇಶದ ಸಂಸ್ಕೃತಿಗೆ ಹಾಗೂ ಮಹಿಳೆಯರು ರಾಜಕಾರಣದಲ್ಲಿ ಭಾಗವಹಿಸುವುದಕ್ಕೆ ಹತ್ತಿರದ ಸಂಬಂಧವಿದೆಯೆಂದು ಸಾಮಾನ್ಯವಾಗಿ ನಂಬಿರುವ ವಿಚಾರವಾಗಿದೆ. ಈ ಅಭಿಪ್ರಾಯವು ಇಸ್ಲಾಮಿಕ್ ದೇಶಗಳ ಅಂಕಿ ಅಂಶಗಳಿಂದ ಸಾಬೀತಾಗಿದೆ. ಈ ದೇಶಗಳಲ್ಲಿ, ಸಾರ್ವಜನಿಕ ಜೀವನದಲ್ಲಿ ಭಾಗವಹಿಸಲು ಹೇರಿರುವ ನಿಷೇಧಗಳಿಂದಾಗಿ ಈ ದೇಶಗಳ ರಾಜಕಾರಣದಲ್ಲಿ ಮಹಿಳೆಯರ ಪ್ರಮಾಣ ಕಡಿಮೆ ಇರುವುದನ್ನು ಗಮನಿಸಬಹುದು. 1998ರ ಅಂತ್ಯದಲ್ಲಿ ಅರಬ್ ದೇಶಗಳಲ್ಲಿ ಕೇವಲ 3.5ರಷ್ಟು ಮಹಿಳೆಯರು ಶಾಸಕಿಯರಾಗಿದ್ದರು.

ಆದರೆ ಇಸ್ಲಾಂ ಸಂಸ್ಕೃತಿ ಪ್ರಧಾನವಾಗಿರುವ ಇಂಡೋನೇಷಿಯಾ, ಸಿರಿಯಾ, ಬಾಂಗ್ಲಾ ದೇಶ ಮುಂತಾದ ದೇಶಗಳಲ್ಲಿ ಶಾಸಕಾಂಗಗಳಲ್ಲಿ ಸ್ತ್ರೀಯರ ಸಂಖ್ಯೆ ಶೇ.9ರಿಂದ 12. ಇದು ಜಗತ್ತಿನ ಸರಾಸರಿ ಪ್ರಮಾಣಕ್ಕೆ ಸರಿಸಮವಾಗಿದೆ. ಬೆನೇಜೀರ್ ಭುಟ್ಟೋ, ಬೇಗಂ ಖಲೀದಾ ಜಿಯಾ, ಶೇಖ್

ಹಸೀನಾ ಅತ್ಯುನ್ನತ ರಾಜಕೀಯ ಸ್ಥಾನವನ್ನು ಅಲಂಕರಿಸಿರುವುದನ್ನು ನಾವು ಗಮನಿಸಬಹುದು.

ನಾರ್ಡಿಕ್ ದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ರಾಜಕೀಯ ಪ್ರವೇಶಿಸಿರುವುದನ್ನು ನಾವು ನೋಡಬಹುದು. ಇಂತಹ ದೇಶಗಳಲ್ಲಿನ ರಾಜಕೀಯ ಸಂಸ್ಕೃತಿಯು ಮಹಿಳೆಯ ಭಾಗವಹಿಸುವಿಕೆಗೆ ಪೂರಕವಾಗಿದೆ. ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಹಾಗೂ ಸಾಕ್ಷರತೆಯ ಪ್ರಮಾಣದಲ್ಲಿ ಹೆಚ್ಚಳವೂ ಸಹ ಪೂರಕ ಪರಿಣಾಮವನ್ನು ಬೀರಿದೆ.

ವಿಭಿನ್ನವಾದ ಚುನಾವಣಾ ಕಾನೂನು, ಮತದಾನದ ವಿಧಾನವೂ ಸಹ ಮಹಿಳೆಯರ ಪ್ರಾತಿನಿಧ್ಯದ ಮೇಲೆ ಪರಿಣಾಮವನ್ನು ಬೀರುತ್ತದೆ. ಹಲವಾರು ದೇಶದ ಶಾಸಕಾಂಗಗಳಲ್ಲಿ, ನಿರ್ದಿಷ್ಟ ಕೋಟಾ ಅಥವಾ ರಾಜಕೀಯ ಪಕ್ಷದಲ್ಲಿ ನಿರ್ದಿಷ್ಟ ಕೋಟಾ ನೀಡುವ ಬಗ್ಗೆ ಚಿಂತಿಸಲಾಗುತ್ತಿದೆ. ಸ್ವೀಡನ್‌ನಂತಹ ಪ್ರಜಾಪ್ರಭುತ್ವ ದೇಶಗಳಲ್ಲಿ ಮಹಿಳೆಯರಿಗೆ ನೀಡಲಾದ ನಿರ್ದಿಷ್ಟ ಕೋಟಾದಿಂದಾಗಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯದಲ್ಲಿ ಭಾಗವಹಿಸಲು ಸಾಧ್ಯವಾಗಿದೆ.

ಕೆಲವು ದೇಶಗಳಲ್ಲಿ ಚುನಾವಣಾ ಪದ್ಧತಿಯು ಮಹಿಳೆಯರ ಭಾಗವಹಿಸುವಿಕೆಯ ಮೇಲೆ ಪ್ರೋತ್ಸಾಹದಾಯಕ ಪರಿಣಾಮವನ್ನು ಬೀರುವುದಿಲ್ಲ. ಇಂತಹ ಸಂದರ್ಭದಲ್ಲಿ ಕೇವಲ ಬೆರಳೆಣಿಕೆಯಷ್ಟು ಮಹಿಳೆಯರು ಶಾಸಕಾಂಗಗಳಿಗೆ ಆಯ್ಕೆಯಾಗುತ್ತಾರೆ. ಭಾರತದಲ್ಲಿ ಒಂದು ಕ್ಷೇತ್ರದಿಂದ ಏಕವ್ಯಕ್ತಿ ಆಯ್ಕೆಯಾಗುವ ಪದ್ಧತಿಯಿಂದಾಗಿ ಬಹಳಷ್ಟು ಮಹಿಳೆಯರು ಈ ಅವಕಾಶದಿಂದ ವಂಚಿತರಾಗುತ್ತಾರೆ. ಆದರೆ ಒಂದು ಕ್ಷೇತ್ರದಲ್ಲಿ ಒಬ್ಬರಿಗಿಂತ ಹೆಚ್ಚು ಜನರು ಆಯ್ಕೆಯಾಗುವ ಪದ್ಧತಿ ಇರುವ ದೇಶಗಳಲ್ಲಿ ಒಂದು ಕ್ಷೇತ್ರದಿಂದ ಇಬ್ಬರು, ಅಥವಾ ಹೆಚ್ಚು ಜನ ಆಯ್ಕೆಯಾಗುತ್ತಾರೆ. ಇಂತಹ ದೇಶಗಳಲ್ಲಿ ಹೆಚ್ಚು ಮಹಿಳೆಯರು ಆಯ್ಕೆಯಾಗುವುದು ಕಂಡುಬರುತ್ತದೆ.

ಒಂದು ಕ್ಷೇತ್ರದಲ್ಲಿ ಏಕವ್ಯಕ್ತಿಯನ್ನು ಆಯ್ಕೆ ಮಾಡುವ ಪದ್ಧತಿಯಿಂದಾಗಿ ಮಹಿಳೆಯರು ಮಾತ್ರವಲ್ಲದೆ, ಸಮಾಜದ ಇತರ ವರ್ಗದ ಜನರು ಸಹ ಅವಕಾಶಗಳಿಂದ ವಂಚಿತರಾಗುತ್ತಾರೆ. ಅಲ್ಪಸಂಖ್ಯಾತರು ಹಾಗೂ ಶೋಷಿತ ವರ್ಗದ ಜನರು ಅವಕಾಶಗಳಿಂದ ವಂಚಿತರಾಗುತ್ತಾರೆ. ಮತದಾನ ಕ್ರಿಯೆಯಲ್ಲಿ ಸಹಜವಾಗಿ ಇವರ ಸಂಖ್ಯೆ ಕಡಿಮೆಯಾಗುತ್ತದೆ. ಒಂದು ಕ್ಷೇತ್ರದಲ್ಲಿ ಯಾರು ಗೆಲ್ಲುವ ಅಭ್ಯರ್ಥಿಗೆ ಮತ ಹಾಕಿ, ಚುನಾಯಿಸುತ್ತಾರೋ ಅಂತವರು ಮಾತ್ರ ತಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡಿರುತ್ತಾರೆ. ಒಂದು ಕ್ಷೇತ್ರದಲ್ಲಿ ಶೇ. 50ಕ್ಕಿಂತ ಹೆಚ್ಚು ಇರುವ ಜನರು ತಮ್ಮ ಆಯ್ಕೆಯನುಸಾರ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಬಿ.ಜೆ.ಪಿ. ಪ್ರಾಧಾನ್ಯವಾಗಿರುವಲ್ಲಿ ಕಾಂಗ್ರೆಸ್ ಅಭ್ಯರ್ಥಿ, ಹಿಂದೂಗಳು ಪ್ರಾಧಾನ್ಯವಾಗಿರುವಲ್ಲಿ ಮುಸ್ಲಿಂ ಅಭ್ಯರ್ಥಿ, ಚುನಾವಣಾ ವ್ಯವಸ್ಥೆಯಿಂದ ಹೊರಗಿರುವುದು ಅನಿವಾರ್ಯವಾಗುತ್ತದೆ. ಬಹುಪಾಲು ಮತದಾರರು ಇಷ್ಟಪಡುವ ಅಭ್ಯರ್ಥಿಗಳು - ಗೆದ್ದು ಬರುವುದು ಅಸಾಧ್ಯವಾಗುತ್ತದೆ. ಏಕವ್ಯಕ್ತಿಯನ್ನು ಆರಿಸುವ ಪದ್ಧತಿಯಿಂದಾಗಿ ಬಹುಪಾಲು ಜನರು ಇಷ್ಟಪಡುವ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಸಾಧ್ಯವಾಗುವುದಿಲ್ಲ.

ಇತ್ತೀಚಿಗೆ ಭಾರತದಲ್ಲಿ ಶೇ.33ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ ನೀಡಬೇಕೆಂಬ ಬೇಡಿಕೆಯನ್ನು ಇಡಲಾಗಿದೆ. ಈ ಮಸೂದೆಯು ಕಾನೂನಾಗಿ ಮಾರ್ಪಟ್ಟರೆ ಮಹಿಳೆಯರು ನಿರ್ದಿಷ್ಟ ಪ್ರಮಾಣದಲ್ಲಿ ರಾಜಕೀಯದಲ್ಲಿ ಭಾಗವಹಿಸಬೇಕೆಂಬ ಒಂದೇ ಅಂಶದಿಂದ, ರಾಷ್ಟ್ರೀಯ ರಾಜಕಾರಣದಲ್ಲಿ ಮಹಿಳೆಯರು ಪ್ರಾತಿನಿಧ್ಯ ವಹಿಸಲು ಸಾಧ್ಯವಾಗುತ್ತದೆ. ಮೀಸಲಾತಿಯಿಂದಾಗಿ ಲೋಕಸಭೆಯಲ್ಲಿ 43ರ ಸಂಖ್ಯೆಯಿಂದ ಒಂದೇ ಬಾರಿಗೆ 182ಕ್ಕೆ ಏರುತ್ತದೆ. ಇದು ಶೇ. 8%ರಷ್ಟಾಗುತ್ತದೆ. ಜಗತ್ತಿನ ಇತರ ದೇಶಗಳಲ್ಲಿ ನಿರ್ದಿಷ್ಟ ಕೋಟಾ ಪದ್ಧತಿಯಿಂದ ಮಹಿಳೆಯರ ಪ್ರಾತಿನಿಧ್ಯ ಪ್ರಮಾಣದಲ್ಲಿ ಹೆಚ್ಚಳ ಕಂಡುಬರುತ್ತದೆ.

ಅರ್ಜೆಂಟೈನಾದಲ್ಲಿ ಮಹಿಳೆಯರಿಗೆ ನೀಡಿದ ನಿರ್ದಿಷ್ಟ ಕೋಟಾ ಪದ್ಧತಿಯಿಂದ, ಮಹಿಳಾ ಶಾಸಕಿಯರ ಸಂಖ್ಯೆಯಲ್ಲಿ ಹೆಚ್ಚಳ ಉಂಟಾಯಿತು. 1991ರಲ್ಲಿ ಶೇ.4ರಿಂದ 1993ರಲ್ಲಿ ಶೇ. 16 ಹಾಗೂ 1995ರಲ್ಲಿ ಶೇ. 28ರಷ್ಟು ಹೆಚ್ಚಾಯಿತು. ಬ್ರೆಜಿಲ್ ದೇಶದಲ್ಲಿ 1997ರಲ್ಲಿ ಶೇ. 40ರಷ್ಟು ಮಹಿಳೆಯರ ಭಾಗವಹಿಸುವಿಕೆಯಲ್ಲಿ ಹೆಚ್ಚಳ ಉಂಟಾಯಿತು. ಗ್ರೇಟ್ ಬ್ರಿಟನ್‌ನಲ್ಲಿ ಮಹಿಳೆಯರಿಗೆ ನೀಡಿದ ಕೋಟಾ ವ್ಯವಸ್ಥೆಯಿಂದಾಗಿ ಮಹಿಳೆಯರ ಪ್ರಾತಿನಿಧ್ಯ ಶೇ. 18ರಷ್ಟು ದುಪ್ಪಟ್ಟಾಯಿತು.

ಏಕವ್ಯಕ್ತಿಯನ್ನು ಆಯ್ಕೆ ಮಾಡುವ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ನಿರ್ದಿಷ್ಟ ಕೋಟಾ ನೀಡುವುದು ಕೆಲವು ಮಿತಿಯನ್ನು ಹೊಂದಿದೆ. ಇಲ್ಲಿ ಲಿಂಗ ಸಮತೋಲನವನ್ನು ಜಾರಿಗೆ ತರುವ ಉದ್ದೇಶವಿದ್ದರೆ, ಆ ಕ್ಷೇತ್ರದ ಜನರಿಗೆ ತಮ್ಮ ಇಚ್ಛಾನುಸಾರ ಆಯ್ಕೆ ಮಾಡುವ ಅವಕಾಶವನ್ನು ನೀಡಿದಂತಾಗುವುದಿಲ್ಲ. ಭಾರತದಲ್ಲಿ ಬಹುಪಕ್ಷ ಪದ್ಧತಿ ಜಾರಿಯಲ್ಲಿರುವುದರಿಂದ, ಸಾಮಾನ್ಯವಾಗಿ ನಾವು ಶೇ. 50ರಷ್ಟು ಜನರು ಆಯ್ಕೆ ಮಾಡಿದ ಪ್ರತಿನಿಧಿಯನ್ನೇ ನಾವು ಒಪ್ಪಿಕೊಳ್ಳಬೇಕಾಗುತ್ತದೆ.

ಬಹುಪಾಲು ಜನರು ವ್ಯಕ್ತಿಗೆ ಮತ ನೀಡುವುದಕ್ಕಿಂತ ಪಕ್ಷದ ಹಿನ್ನೆಲೆಯಲ್ಲಿ ಮತ ಚಲಾಯಿಸುತ್ತಾರೆ. ಜೊತೆಗೆ ಮಹಿಳಾ ಅಭ್ಯರ್ಥಿಗಳ ಸಂಖ್ಯೆಯು ಕಡಿಮೆ ಇರುವುದು ಕಂಡುಬರುತ್ತದೆ. ಒಂದು ಪಕ್ಷ ಜನಪ್ರಿಯವಾಗಿರುವೆಡೆಯಲ್ಲಿ, ಪ್ರಬಲವಾದ ಪುರುಷನಿಗಿಂತ ದುರ್ಬಲಳಾದ ಮಹಿಳೆಯನ್ನು ಆಯ್ಕೆ ಮಾಡಬೇಕಾಗುತ್ತದೆ.

ಒಂದು ದೇಶದ ವ್ಯವಸ್ಥೆಯಲ್ಲಿ, ಆ ದೇಶದ ಎಲ್ಲಾ ವರ್ಗದ ಜನರ ಪ್ರಾತಿನಿಧ್ಯವಿರಬೇಕಾಗುತ್ತದೆ. ಹಾಗಾಗಿ, ಅದು ಎಲ್ಲ ವರ್ಗದವರು ಭಾಗವಹಿಸಲು ಪೂರಕವಾಗುವಂತಹ ಪ್ರಾತಿನಿಧ್ಯವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಈ ಎಲ್ಲಾ ವರ್ಗಗಳು ಶಾಸಕಾಂಗಗಳಲ್ಲೂ ಪ್ರತಿನಿಧಿಸುವಂತಾಗಬೇಕು.

ಕನ್ನಡಕ್ಕೆ : ***ರಾಜೇಶ್ವರಿ ಹೆಚ್. ಎಸ್.***

ದೇಶದ ಹಿತಾಸಕ್ತಿ = ಅರ್ಹತೆ

ಕಳೆದ ಆಗಸ್ಟ್ ತಿಂಗಳಿನಲ್ಲಿ, ವೈದ್ಯಕೀಯ ಮತ್ತು ಎಂಜಿನೀಯರಿಂಗ್ ಕ್ಷೇತ್ರದಲ್ಲಿ ಸೂಪರ್ ಸ್ಪೆಷಾಲಿಟಿ (ಅತ್ಯುನ್ನತ ವ್ಯಾಸಾಂಗ) ಅಧ್ಯಯನದ ತರಗತಿಗಳಿಗೆ ಸೇರಲು ಅರ್ಹತೆಯೇ ಆಧಾರವಾಗಬೇಕು, ಮೀಸಲಾತಿ ಇರಬಾರದು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತು. ಡಾ. ಅಶುತೋಶ್ ಅಗರ್‌ವಾಲ್ ಅವರು ಉತ್ತರಪ್ರದೇಶ ಸರ್ಕಾರದ ವಿರುದ್ಧ ಹೂಡಿದ್ದ ರಿಟ್ ಪಿಟೀಶನ್ ಮತ್ತು ಡಾ. ಸ್ವೀಟಿ ಭಾರತೀಯ ಅವರು ಮಧ್ಯಪ್ರದೇಶ ಸರ್ಕಾರದ ವಿರುದ್ಧ ಹೂಡಿದ್ದ ರಿಟ್ ಪಿಟೀಶನ್ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಮೀಸಲಾತಿ ವರ್ಗಕ್ಕೆ ಕನಿಷ್ಠ ಅರ್ಹತಾ ಅಂಕಗಳನ್ನು ಕಡಿಮೆ ಮಾಡಿದ್ದ ಎರಡೂ ರಾಜ್ಯಗಳ ಶಾಸನವನ್ನು ರದ್ದುಗೊಳಿಸಿದೆ. ತೀರ್ಪಿನ 4 ಮುಖ್ಯ ಅಂಶಗಳೆಂದರೆ :

1. ವೈದ್ಯಕೀಯ ಶಿಕ್ಷಣದಲ್ಲಿನ ಸ್ನಾತಕೋತ್ತರ ಪದವಿಗಳಲ್ಲಿ ಮೀಸಲಾತಿ ಇರಬೇಕೆ? ಎಂಬ ಪ್ರಶ್ನೆಯನ್ನು ನಾವು ಪರಿಶೀಲಿಸಿಲ್ಲ.
2. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ ನಿಯಮಾನುಸಾರ ವೈದ್ಯಕೀಯ ಸ್ನಾತಕೋತ್ತರ ಪದವಿಗಾಗಿ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಕನಿಷ್ಠ ಅರ್ಹತಾ ಅಂಕಗಳನ್ನು ನಿಗದಿಪಡಿಸಬೇಕು. ಕಾರಣ ಅದು ಕೇವಲ ಸ್ಕ್ರೀನಿಂಗ್ ಟೆಸ್ಟ್ ಅಲ್ಲ.
3. ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯ ಹಂತದಲ್ಲಿ ಮೀಸಲಾತಿ ವರ್ಗಕ್ಕೆ ಕನಿಷ್ಠ ಅರ್ಹತಾ ಅಂಕಗಳನ್ನು ಇಳಿಸಬೇಕೆ ಎಂಬ ಪ್ರಶ್ನೆಯನ್ನು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ನಿರ್ಧರಿಸಬೇಕಾಗುತ್ತದೆ. ಕಾರಣ ಇದು ಸ್ನಾತಕೋತ್ತರ ಶಿಕ್ಷಣದ ಮಟ್ಟದ ಮೇಲೆ ಪರಿಣಾಮ ಬೀರುತ್ತದೆ. ಮೀಸಲಾತಿ ವರ್ಗಕ್ಕೆ ಕನಿಷ್ಠ ಅರ್ಹತಾ ಅಂಕಗಳನ್ನು ಕಡಿಮೆ ಮಾಡಿದರೂ, ಮೀಸಲಾತಿ ವರ್ಗದ ಕನಿಷ್ಠ ಅರ್ಹತಾ ಅಂಕಗಳಿಗೂ, ಸಾಮಾನ್ಯ ವರ್ಗದ ಕನಿಷ್ಠ ಅರ್ಹತಾ ಅಂಕಗಳಿಗೂ ಹೆಚ್ಚಿನ ವ್ಯತ್ಯಾಸವಿರಬಾರದು. ಮೀಸಲಾತಿ ವರ್ಗಕ್ಕೆ ಶೇ. 20 ಕನಿಷ್ಠ ಅರ್ಹತಾ ಅಂಕ ಮತ್ತು ಸಾಮಾನ್ಯ ವರ್ಗಕ್ಕೆ ಶೇ. 45 ಕನಿಷ್ಠ ಅರ್ಹತಾ ಅಂಕಗಳನ್ನು ನಿಗದಿಪಡಿಸುವುದು ಕಲಂ 15(4) ಪ್ರಕಾರ ಸರಿಯಲ್ಲ. ಅಲ್ಲದೆ ಇದು ಸ್ನಾತಕೋತ್ತರ ಮಟ್ಟದಲ್ಲಿ ಅನುಚಿತವಾಗಿದ್ದು, ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ.
4. ಅತ್ಯುನ್ನತ ವ್ಯಾಸಂಗದ ಪ್ರವೇಶದ ಹಂತದಲ್ಲಿ ಯಾವುದೇ ವಿಶೇಷ ಸೌಲಭ್ಯಗಳಿಗೆ ಅನುಮತಿ ಇಲ್ಲ, ಕಾರಣ ಅದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ. ಅರ್ಹತೆಯೊಂದೇ ಆಯ್ಕೆ ಆಧಾರವಾಗಬೇಕು. ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಸಂವಿಧಾನದ ಕಲಂ 14, 15 (4), 16(4) ಹಾಗು 335ನ್ನು ಉಲ್ಲೇಖಿಸಲಾಗಿದೆ.

ತೀರ್ಪು ಬಂದ ಕೂಡಲೇ ದೇಶದ ಪ್ರಮುಖ ಪತ್ರಿಕೆಗಳು ತೀರ್ಪನ್ನು ಕುರಿತು ಪ್ರಕಟಿಸಿದವು. ಬಹುಪಾಲು ಪತ್ರಿಕೆಗಳು, ತಜ್ಞರು, ಮೇಧಾವಿಗಳು ಈ ತೀರ್ಪು ಅರ್ಹತೆಗೆ, ದಕ್ಷತೆಗೆ ಸಂದ ಜಯವೆಂದು ಹಾಡಿ ಹೊಗಳಿದರು. ದಿನ ಪತ್ರಿಕೆಗಳಲ್ಲಿ ಬಂದ ಕೆಲವು ವರದಿಗಳನ್ನು ಗಮನಿಸಿದರೆ ಹಿಂದಿನ ಉದ್ದೇಶಗಳು ಸ್ಪಷ್ಟವಾಗಿ ಗೋಚರಿಸುತ್ತದೆ.

ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪು ಅತ್ಯಂತ ಮಹತ್ವಪೂರ್ಣವಾಗಿದೆಯಲ್ಲದೆ ದೇಶ ಹಾಗು ಸಮಾಜದ ಹಿತದೃಷ್ಟಿಯಿಂದ ಸ್ವಾಗತಾರ್ಹವೂ ಆಗಿದೆ. .... ಆದರೆ ಅದು (ಮೀಸಲಾತಿ) ವಿಶೇಷ ಪರಿಣಿತಿಯ ಕ್ಷೇತ್ರಕ್ಕೂ ಅನ್ವಯವಾದರೆ ಸಮರ್ಥ ವೈದ್ಯ-ಇಂಜಿನಿಯರ್‌ರ ತಯಾರಿಕೆಗೆ ವ್ಯತ್ಯಯವನ್ನುಂಟುಮಾಡಬಹುದೆಂಬ ವಾದದಲ್ಲಿ ಹುರುಳಿದೆ....... ಮೀಸಲಾತಿ ಸಂಪೂರ್ಣ ಕೈಬಿಡಬೇಕೆಂದೇನೂ ಅಲ್ಲ, ಆ ವಿಷಯದಲ್ಲಿ ವಿವೇಚನೆಯ ಅಗತ್ಯತೆಯನ್ನು ನ್ಯಾಯಾಂಗ ಪ್ರತಿಪಾದಿಸಿವೆಯಷ್ಟೆ. - *ಸಂಯುಕ್ತ ಕರ್ನಾಟಕ ಸಂಪಾದಕೀಯ 18.8.1999*

.... ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಐತಿಹಾಸಿಕ ಮತ್ತು ಮಹತ್ವವಾದುದು. ಅಲ್ಲದೆ, ರಾಷ್ಟ್ರದ ಹಿತದೃಷ್ಟಿಯಿಂದ ಕೂಡಿದ್ದು ಎಂದೂ ಹೇಳಬಹುದು. ಮುಖ್ಯವಾಗಿ ವೈದ್ಯಕೀಯ ರಂಗದಲ್ಲಿ ಗುಣಮಟ್ಟ ಹೆಚ್ಚಿಸಬೇಕಾದ ಅಗತ್ಯ ಇರುವ ಹಿನ್ನೆಲೆಯಲ್ಲಿ ಇದು ಸ್ವಾಗತಾರ್ಹ ತೀರ್ಪು ಎನ್ನಲೇಬೇಕು....... ಈ ಮೀಸಲಾತಿ ಎಷ್ಟು ವರ್ಷ ಕಾಲ ಅದಕ್ಕೆ ಗಡುವು ಬೇಡವೇ ಎಂದು ಇತರ ವರ್ಗಗಳವರು ಸಹಜವಾಗಿಯೇ ಕೇಳುವಂತಾಗಿದೆ. .... *ಪ್ರಜಾವಾಣಿ ಸಂಪಾದಕೀಯ 14.8.1999*

ಪಾಲು ಮತ್ತು ರಿಯಾಯಿತಿ ನೀತಿಗಳನ್ನು ಎಲ್ಲಾ ಕ್ಷೇತ್ರಗಳಲ್ಲೂ ಮತ್ತು ಎಲ್ಲಾ ಮಟ್ಟಗಳಲ್ಲೂ (ಹಿರಿಯ ಹುದ್ದೆಗಳಿಗೆ

ಬಡ್ತಿಯೂ ಸೇರಿದಂತೆ) ಅನುಸರಿಸುವ ಮೂಲಕ ನಾವು ಜೀವನದ ಪ್ರತಿಯೊಂದು ಚಟುವಟಿಕೆಯಲ್ಲೂ ಗುಣಾತ್ಮಕತೆಯನ್ನು ಕಡೆಗಣಿಸಿದ್ದೇವೆ. ಯಾರ ಉಪಯೋಗಕ್ಕಾಗಿ ಈ ರಿಯಾಯಿತಿ ನೀತಿಯನ್ನು ಮಾಡಲಾಗಿದೆಯೋ ಅವರುಗಳೇ ಆ ನೀತಿಯ ಬಲಿಪಶುಗಳಾಗಿದ್ದಾರೆ ಎಂಬುದನ್ನು ಪುನರುಚ್ಚರಿಸಿಕೊಳ್ಳಬೇಕಾಗಿದೆ. ಹಾಗಾಗಿ ಮೀಸಲಾತಿಯ ಉದ್ದೇಶವೇ ಸೋತಿದೆ. ಸಾಮಾಜಿಕ ನ್ಯಾಯವನ್ನು ಪಡೆದುಕೊಳ್ಳುವ ಪ್ರಯತ್ನದಲ್ಲಿ ಸಮಾಜ ಕಲ್ಯಾಣವನ್ನು ಬದಿಗೊತ್ತುವಲ್ಲಿ ಯಶಸ್ವಿಯಾಗಿದ್ದೇವೆ.

ದೇಶದ ಗುಣಾತ್ಮ ಜೀವನವನ್ನು ನಿರ್ಧರಿಸುವ ಕ್ಷೇತ್ರದಲ್ಲಿ, ಆಯ್ಕೆಯ ಪಕ್ರಿಯೆ ಜಾತಿ ಆಧಾರಿತ ಮೀಸಲಾತಿಯಿಂದ ನಿರ್ಧರಿತವಾದರೆ ಅದು ಮುಂದೆ ದಕ್ಷತೆಯ ಮೇಲೆ ಪರಿಣಾಮ ಬೀರುತ್ತದೆ. ಪ್ರೊಫೆಶನಲ್ ಶಿಕ್ಷಣದ ಎಲ್ಲಾ ಹಂತಗಳಲ್ಲೂ ಅರ್ಹತೆಯೊಂದೇ ಆಧಾರವಾಗಬೇಕು. - *ವತ್ಸಲಾ ವೇದಾಂತಂ, ಡೆಕ್ಕನ್ ಹೆರಾಲ್ಡ್, 5.9.1999*

ಈ ತೀರ್ಪು ಸಂಖ್ಯೆಗಿಂತ ಗುಣಾತ್ಮಕತೆಗೆ ಒತ್ತು ನೀಡಿದೆ. ಹಿಂದುಳಿದ ವರ್ಗಗಳ ಜನರು ಪ್ರೊಫೆಶನಲ್ ಕೋರ್ಸುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದಿದ್ದುದರಿಂದ ಅರ್ಹತೆ ಇಲ್ಲದಿದ್ದರೂ ಅವರನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ವಾದಿಸಲಾಗಿದೆ. ಹಾಗಾಗಿ ಪ್ರವೇಶದಲ್ಲಿ ಸಮರ್ಪಕ ಸಂಖ್ಯೆ ಇರಬೇಕೆನ್ನುವುದು ಹಿಂದುಳಿದ ವರ್ಗಗಳ ಜನ್ಮಸಿದ್ಧ ಹಕ್ಕು ಎಂದು ಪರಿಗಣಿಸಲಾಗಿತ್ತು. ಅದು ಇತರೆ ಜನರ ಮಾನವ ಹಕ್ಕುಗಳಿಗೆ ವಿರುದ್ಧವಾಗಿದೆ. ಹೃದಯದ ಶಸ್ತ್ರಚಿಕಿತ್ಸೆಯ ಅಗತ್ಯವಿರುವ ರೋಗಿಗೆ (ಅವನು ಹಿಂದುಳಿದ ವರ್ಗಕ್ಕೆ ಸೇರಿದವನೂ ಆಗಿರಬಹುದು) ಮಾನವ ಹಕ್ಕಿದೆ. ಆ ಆರೋಗ್ಯ ಅರ್ಹತೆ ಇಲ್ಲದ ಶಸ್ತ್ರಚಿಕಿತ್ಸಕನ ಕೈಯಲ್ಲಿ ಪ್ರಾಣ ಪಣವಾಗಿಡುವ ಅಪಾಯವನ್ನು ತಂದುಕೊಳ್ಳಲಾರ. ಮಂಡಲ ಆಯೋಗದ ಬಗ್ಗೆ ಹೊಡೆದಾಡಿದಂತಹ ವಿ.ಪಿ.ಸಿಂಗ್ ಅವರೇ ಮೀಸಲಾತಿ ವರ್ಗಕ್ಕೆ ಸೇರಿದ ಯಾವ ಡಾಕ್ಟರ್‌ನ್ನು ನಂಬಲಿಲ್ಲ. ದೇಶದ ಅತ್ಯುತ್ತಮ ತಜ್ಞರು ಅವರನ್ನು ತೃಪ್ತಿಪಡಿಸಲಿಲ್ಲ. ಆದ್ದರಿಂದ ಜಗತ್ತಿನ ಅತ್ಯುತ್ತಮ ತಜ್ಞರು ಅವರಿಗೆ ಈ ಚಿಕಿತ್ಸೆ ನೀಡುತ್ತಿದ್ದಾರೆ, ಅದೂ ದುಬಾರಿ ಹಣ ವ್ಯಯ ಮಾಡಿ. ಮತ್ತೊಂದೆಡೆ ನಿರ್ಭಾಗ್ಯ ಬಡವನೊಬ್ಬ ಅನರ್ಹನ ಕೈಯಲ್ಲಿ ತೊಂದರೆ ಅನುಭವಿಸಬೇಕು. ಇದು ನ್ಯಾಯವೆ? - *ಇಂದಿರೇಸನ್ (IIT ಮದ್ರಾಸ್‌ನ ಮಾಜಿ ನಿರ್ದೇಶಕ) ಡೆಕ್ಕನ್ ಹೆರಾಲ್ಡ್ 11.9.99*

ತೀರ್ಪಿನ ಬಗ್ಗೆ, ವಿದ್ವಾಂಸರುಗಳ ಪ್ರತಿಕ್ರಿಯೆಯನ್ನು ಓದಿದರೆ ಅನೇಕ ಪ್ರಶ್ನೆಗಳೇಳುತ್ತವೆ.

ಅತ್ಯುನ್ನತ ವೈದ್ಯಕೀಯ ಶಿಕ್ಷಣದಲ್ಲಿ ಮೀಸಲಾತಿ ವರ್ಗದವರ ಪ್ರವೇಶ ಇತ್ತೀಚಿನದು, ಅವರ ಸಂಖ್ಯೆ ಬೆರಳೆಣಿಕೆಯದು. ಅಂದರೆ ಇಲ್ಲಿಯವರೆಗೂ ಅಲ್ಲಿದ್ದವರು ನೈಜ, ಅರ್ಹ ತಜ್ಞರು. ಆದರೂ ಯಾಕೆ ದೇಶದ ಹಿತಾಸಕ್ತಿ ಹಾಳಾಗಿದೆ?

ಯಾವ ಮೀಸಲು ತಜ್ಞರಿಂದ ಎಷ್ಟು ಪ್ರಾಣಹಾನಿಯಾಗಿದೆ?

ನೈಜ ತಜ್ಞರು ಗ್ರಾಮ, ಜಿಲ್ಲಾ ಆಸ್ಪತ್ರೆಗಳಲ್ಲಿ ಎಷ್ಟು ಜನರಿದ್ದಾರೆ? ಎಷ್ಟು ಜನ ಅಪಲೊ, ಮಲ್ಯ, ವೊಕಾರ್ಡ್‌ನಲ್ಲಿದ್ದಾರೆ. Nimhans, ಕಿದ್ವಾಯಿ, ಜಯದೇವ ಹೃದ್ರೋಗ ಸಂಸ್ಥೆಗಳ ಪ್ರಮುಖರು ನೈಜ ತಜ್ಞರೊ? ಮೀಸಲು ತಜ್ಞರೊ?.

ದೇಶದ ಹಿತಾಸಕ್ತಿ, ಉದ್ಧಾರ ಬರಿ Meritನಿಂದಷ್ಟೇ ಸಾಧ್ಯವೆ? ಅರ್ಹತೆ, ಪ್ರತಿಭೆ ಎಂದರೇನು? ವೈದ್ಯರೂ ಎಂಜಿನಿಯರುಗಳಿಗಷ್ಟೆ ಪ್ರತಿಭೆ ಅರ್ಹತೆ ಸೀಮಿತವೆ? ನೂರು ಸಸ್ಯಗಳನ್ನು ಗುರುತಿಸಿ ಹೇಳುವ ಅಂಡಮಾನಿನ ಆದಿವಾಸಿಗಳು, ಯಾವುದೇ ಕ್ರಿಮಿನಾಶಕ, Preservativeಗಳಿಲ್ಲದೆ ವರ್ಷಾನುಗಟ್ಟಲೆ ಆಹಾರ ಧಾನ್ಯ/ಪದಾರ್ಥ ಕಾದಿಟ್ಟುಕೊಳ್ಳಲು ಗೊತ್ತಿರುವ ಲಕ್ಷಾಂತರ ಮಹಿಳೆಯರು ಪ್ರತಿಭಾವಂತರಲ್ಲವೆ? ಅದ್ಭುತವಾಗಿ ಬಟ್ಟೆ ನೆಯ್ದು ಬಣ್ಣ ಹಾಕುವ ನೇಕಾರರು ಪ್ರತಿಭಾವಂತರಲ್ಲವೆ?

National interest ಅಂದ್ರೆ ಏನು? ದೇಶದ ಮುಕ್ಕಾಲುವಾಸಿ ದಲಿತರು (ಪ.ಜಾ., ಪಂಗಡ ಎಲ್ಲರೂ) ದೇಶದ ಹಿತಾಸಕ್ತಿಯಲ್ಲಿ ಸೇರಿಲ್ಲವೆ? Super specialised doctorsಗಿಂತ ನಮಗೆ ಬೇಕಾಗಿರೋದು ಶುದ್ಧವಾದ ನೀರು. ವಿಜ್ಞಾನಿ ಸಿ.ಎನ್.ಆರ್. ರಾವ್ ಪ್ರಕಾರ 60% ಹೆಚ್ಚಿನ ಖಾಯಿಲೆಗಳಿಗೆ ಕಾರಣ ಅಶುದ್ಧವಾದ ನೀರು. ವಾಂತಿ ಭೇದಿಯಿಂದ ಸಾಯುವ ಲಕ್ಷಾಂತರ ಮಕ್ಕಳ ಜೀವವನ್ನು ಉಳಿಸಲು ಕೇವಲ ಶುದ್ಧ ಸ್ವಚ್ಛ ನೀರು ಬೇಕಾಗಿರುವುದು ತಜ್ಞರಲ್ಲ.

ಮೀಸಲು ವೈದ್ಯರಲ್ಲೂ ಉತ್ತಮರು, ದಕ್ಷರು ಇದ್ದಾರೆ, ಸಂಖ್ಯೆಯಲ್ಲೂ ಹೆಚ್ಚಾಗುತ್ತಿದ್ದಾರೆ. ಕೃಷಿ ವಿಶ್ವವಿದ್ಯಾಲಯದ ಆಯ್ಕೆಯಲ್ಲಿ ಮೀಸಲು ಮತ್ತು ಸಾಮಾನ್ಯ ವರ್ಗದವರ ಅಂಕಗಳಲ್ಲಿ ಇದ್ದ ಅತಿ ಕಡಿಮೆ ವ್ಯತ್ಯಾಸ, ಎಲ್ಲಾ ಅರ್ಹತೆ ಇದ್ದರೂ (ಅದೂ ಸಾಮಾನ್ಯ ವರ್ಗದವರ ಅರ್ಹತೆ) ನ್ಯಾಯವಾಗಿ ಸಿಗಬೇಕಾದ ಬಡ್ತಿಗಾಗಿ 15 ವರ್ಷ ಹೋರಾಟ ಮಾಡಿದ ನೇತ್ರ ತಜ್ಞರ ನಿದರ್ಶನಗಳಿವೆ. ಪ್ರಖ್ಯಾತ ನೇತ್ರ ತಜ್ಞರೊಬ್ಬರಿಂದ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ವ್ಯಕ್ತಿಯೊಬ್ಬ, ವೈದ್ಯರು ಹಿಂದುಳಿದ ಜಾತಿಯವರೆಂದು ತಿಳಿದು ಸ್ನಾನ

ಮಾಡಿಕೊಂಡು ಕಣ್ಣು ಕಳೆದುಕೊಂಡಂತಹ ಘಟನೆಗಳಿವೆ. ಇಂತಹ ಅಂಶಗಳನ್ನು ವಿದ್ವಾಂಸರು, ಪಂಡಿತರುಗಳು ಯಾವ ಕಾರಣಕ್ಕೂ ಗಮನಿಸುವುದೇ ಇಲ್ಲ. ಅವರು ಗಮನಿಸುವ ಮೊದಲು ಸಾಮಾಜಿಕ ನ್ಯಾಯದ ಬಗ್ಗೆ ಕಾಳಜಿ ಇರುವ ಜನ ಎಚ್ಚೆತ್ತುಕೊಳ್ಳಬೇಕು. ಅದರಲ್ಲೂ ಮೀಸಲಾತಿ ಸೌಲಭ್ಯ ಪಡೆದು ಉತ್ತಮ ಸ್ಥಿತಿಯಲ್ಲಿರುವ ವಿದ್ಯಾವಂತ ಜನರು ಮಂಪರಿನಿಂದ ಎದ್ದು ಜಾಗರೂಕರಾಗಿ ಮೀಸಲಾತಿಯಂತಹ ಸೌಲಭ್ಯಗಳು ಹೊಲೆ, ಮಾದಿಗರಷ್ಟೆ ಅಲ್ಲದೆ ದಕ್ಕಲರು, ಮಾಚಾಳರು, ಕೊರವರು, ಮಲ ಹೊರುವವರು ಇನ್ನೂ ಅನೇಕಾನೇಕ ದನಿ ಕಳೆದುಕೊಂಡ ಜನರಿಗೆ ತಲುಪುವಂತೆ ಮಾಡಬೇಕು. ಇಲ್ಲ ದೇಶದ ಹಿತಾಸಕ್ತಿಯನ್ನು ಹೆಗಲಮೇಲೆ ಹೊತ್ತಿರುವ ತಜ್ಞರುಗಳು 1.1%. (ಶಿಕ್ಷಣ ಕ್ಷೇತ್ರದಲ್ಲಿರುವ ಮನಃಶಾಸ್ತ್ರಜ್ಞರ ಪ್ರಕಾರ ಇಡೀ ಜಗತ್ತಿನ ಜನರನ್ನು graph sheetನ ಮೇಲೆ ಹಾಕಿದರೆ 1.1% ಅಸಾಧಾರಣ ಬುದ್ಧಿಶಕ್ತಿಯುಳ್ಳವರು. 1.6% ಜನ ದಡ್ಡರಿದ್ದರೆ ಉಳಿದವರೆಲ್ಲ ಸಾಧಾರಣ ಬುದ್ಧಿ ಮಟ್ಟದವರೆಂದು ಹೇಳುತ್ತಾರೆ) ಜನರಷ್ಟೆ ಭೂಮಿ ಮೇಲೆ ಬದುಕಲು ಅರ್ಹರೆಂಬ ಕಾನೂನು ತಂದುಬಿಡುತ್ತಾರೆ.

ಕಲಂ 14 : ಕಾನೂನಿನ ಮುಂದೆ ಎಲ್ಲರೂ ಸಮಾನರು. ಭಾರತದ ಗಡಿಯೊಳಗೆ, ರಾಜ್ಯಾಂಗವು ಯಾವುದೇ ವ್ಯಕ್ತಿಗೆ ಕಾನೂನಿನ ಸಮಾನತೆಯನ್ನು ಅಥವಾ ಕಾನೂನಿನ ರಕ್ಷಣೆಯನ್ನು ನಿರಾಕರಿಸುವುದಿಲ್ಲ.

ಕಲಂ 15 (4) : 15ನೇ ಕಲಂ ಆಗಲಿ ಅಥವಾ ಆರ್ಟಿಕಲ್ 29ರ 2ನೇ ಕಲಂ ಆಗಲಿ (29 (2) - ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳನ್ನು ಕುರಿತು ಹೇಳುತ್ತದೆ. ವಿಶೇಷವಾಗಿ ಅಲ್ಪಸಂಖ್ಯಾತರು ಮತ್ತು ಪರಿಶಿಷ್ಟ ಜಾತಿ ಜನಾಂಗದವರಿಗೆ) ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಜನರಿಗೆ ಅಥವಾ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ ಏಳಿಗೆಗಾಗಿ ಯಾವುದೇ ವಿಶೇಷ ಸೌಲಭ್ಯವನ್ನು ಕಲ್ಪಿಸಲು ರಾಜ್ಯಾಂಗಕ್ಕೆ ಅಡ್ಡಿಯಾಗಬಾರದು.

ಕಲಂ 16 (4) - ಕಲಂ 16 ಸಾರ್ವಜನಿಕ ಉದ್ಯೋಗದಲ್ಲಿ ಸಮಾನ ಅವಕಾಶ ಕುರಿತು ಹೇಳುತ್ತದೆ. 16 (4) - ರಾಜ್ಯಾಂಗಕ್ಕೆ ಸರ್ಕಾರಿ ಹುದ್ದೆಗಳಲ್ಲಿ ಹಿಂದುಳಿದ ವರ್ಗಗಳ ಪ್ರಾತಿನಿಧ್ಯ ಸಾಕಷ್ಟು ಇಲ್ಲವೆನಿಸಿದಲ್ಲಿ ಆ ವರ್ಗದವರಿಗೆ ಉದ್ಯೋಗ ಹಾಗು ಹುದ್ದೆಗಳಲ್ಲಿ ಮೀಸಲಿಡಲು ಯಾವುದೇ ಅವಕಾಶವನ್ನು ಕಲ್ಪಿಸಿಕೊಡುವ ಅಧಿಕಾರ ನೀಡುತ್ತದೆ.

ಕಲಂ 335 - ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳಿಗೆ ಉದ್ಯೋಗ, ಹುದ್ದೆಗಳಲ್ಲಿ ಹಕ್ಕು. ರಾಜ್ಯ ಅಥವಾ ಕೇಂದ್ರ ಸರ್ಕಾರದ ಹುದ್ದೆಗಳಲ್ಲಿ, ಉದ್ಯೋಗಗಳಲ್ಲಿ, ಪ.ಜಾ, ಪ.ಪಂ.ಗಳ ಹಕ್ಕನ್ನು ಪರಿಗಣಿಸಬೇಕು. ಜೊತೆಗೆ ಸಮರ್ಥ ಆಡಳಿತವನ್ನು ಕಾಪಾಡಿಕೊಳ್ಳಬೇಕು.

ಇಡೀ ತೀರ್ಪಿನಲ್ಲಿ ಕಲಂ 14, ಕಲಂ 335ರ ಅದರಲ್ಲೂ ಸಮರ್ಥ ಆಡಳಿತವನ್ನು ಕಾಪಾಡಿಕೊಳ್ಳುವ ಅಂಶವನ್ನು ಎತ್ತಿ ಹಿಡಿದು ಸೂಕ್ಷ್ಮವಾಗಿ ಕಲಂ 15 (4), ಕಲಂ 16 (4) ಅನ್ನು Sideline ಮಾಡಲಾಗಿದೆ ಅಥವಾ ಅದರ ವಿರುದ್ಧವಾಗಿ ಬಳಸಿಕೊಂಡಿದೆ. ಕಲಂ 15(4)ಕ್ಕೆ ಸಂಬಂಧಿಸಿದಂತೆ ತೀರ್ಪಿನಲ್ಲಿ ಹೀಗೆ ಹೇಳಲಾಗಿದೆ. ರಾಜ್ಯಾಂಗವೂ ಆ ವರ್ಗದವರ ಏಳಿಗೆಯನ್ನು ನೋಡಿಕೊಳ್ಳುವ ನಿಟ್ಟಿನಲ್ಲಿ ಉಳಿದ ಸಮಾಜದ ಏಳಿಗೆಯನ್ನು ಕಡೆಗಣಿಸುವಂತಹ ಪ್ರತ್ಯೇಕ ಗುಣವನ್ನೇನೂ ಈ ಕಲಂ ಹೊಂದಿಲ್ಲ. ಒಟ್ಟಾರೆ ಸಮಾಜದ ಏಳಿಗೆಗಾಗಿ ಹಿಂದುಳಿದ ವರ್ಗಗಳ ಏಳಿಗೆಯೂ ಮುಖ್ಯ ಎಂಬುದಕ್ಕಾಗಿ ಕಲಂ 15 (4)ನ್ನು ರಚಿಸಿರುವುದು. ಈ ಅಂಶಕ್ಕೆ ಒತ್ತು ನೀಡಲು ಅರ್ಹತೆಯ ಅಂಶವನ್ನು ಮತ್ತು ಹಿಂದೆ ಬೇರೆ ಸಂದರ್ಭಗಳಲ್ಲಿ ನೀಡಲಾದ ತೀರ್ಪಿನ ಕೆಲವು (ಬಹಳ) ಉಲ್ಲೇಖನಗಳನ್ನು ಈ ತೀರ್ಪಿನಲ್ಲಿ ಅತ್ಯಂತ ಜಾಣ್ಮೆಯಿಂದ ಬಳಸಿಕೊಳ್ಳಲಾಗಿದೆ. ಉದಾಹರಣೆಗೆ Para 16ರಲ್ಲಿನ ಸಾಲುಗಳು (ದಪ್ಪಕ್ಷರಗಳಲ್ಲಿ) **ತಾಂತ್ರಿಕ, ವೈದ್ಯಕೀಯ, ಇಂಜಿನಿಯರಿಂಗ್ ಕಾಲೇಜುಗಳು ಅಥವಾ ಆ ರೀತಿಯ ಸಂಸ್ಥೆಗಳಲ್ಲಿ, ಹೋಲ್‌ಸೇಲ್ ಮೀಸಲಾತಿಯು ಅರ್ಹತೆಯನ್ನು ಸಂಪೂರ್ಣವಾಗಿ ಕಡೆಗಣಿಸಿದರೆ ಅದು ದೇಶದ ಹಿತಾಸಕ್ತಿಗೆ ತೀವ್ರ ಕೆಡುಕುಂಟು ಮಾಡುತ್ತದೆ.**

ಡಾ. ಜಗದೀಶ ಮತ್ತು ಇತರರು v/s ಯೂನಿಯನ್ ಆಫ್ ಇಂಡಿಯಾ ಕೇಸಿನಲ್ಲಿ ಕೃಷ್ಣ ಅಯ್ಯರ್ ಅವರ ವಾದದ ಈ ಸಾಲಿನ್ನು ತೀರ್ಪು ಬಳಸಿಕೊಂಡಿದೆ. ಸಮರ್ಥತೆಯ ಬೇಡಿಕೆಗಳ ಮೂಲಕ ಮೀಸಲಾತಿಯನ್ನು ಹತೋಟಿಯಲ್ಲಿಡುವುದು ಮೊದಲ ಎಚ್ಚರಿಕೆ. ಕನಿಷ್ಟ ಅರ್ಹತೆಯೂ ಇಲ್ಲದಿರುವಲ್ಲಿ ಮೀಸಲಾತಿಯ ರಕ್ಷಣೆಯನ್ನು ವಿಸ್ತರಿಸಲಾಗುವುದಿಲ್ಲ. ಹಾಗೆಯೇ ಎಲ್ಲಾ ಉತ್ತಮ ಅರ್ಹತೆಯನ್ನು ಮೀಸಲಾತಿಯ ಮೂಲಕ ಸಂಪೂರ್ಣವಾಗಿ ಕಡೆಗಣಿಸಬಾರದು. ಹೀಗೆ ಇಡೀ ತೀರ್ಪಿನಲ್ಲಿ ಮೀಸಲಾತಿಯನ್ನು ನೇರವಾಗಿ ವಿರೋಧಿಸದೆ, ಅರ್ಹತೆ ಬಗ್ಗೆ ಹೆಚ್ಚು ಒತ್ತು ನೀಡಲಾಗಿದೆ. ಎಲ್ಲೊ ಒಂದೆರಡು ಕಡೆ The best brans in the country irrespective of the class to which they belong ಹೇಳಿರುವುದನ್ನು ಬಿಟ್ಟರೆ ಇಡೀ ತೀರ್ಪು ಅರ್ಹತೆ V/s ಮೀಸಲಾತಿ ಎಂಬಂತಿದೆ.

- ಸರಸ್ವತಿ ದು.

ಹಸಿರು ಕಣ್ಣಿನ ಹುಡಿಗೆಯರು

ಹಸಿರು ಕಣ್ಣಿನ ಹುಡಿಗೆಯರು ಕಣ್ಣಲ್ಲಿ
ಕರ್ಪೂರವನ್ನು ಉರಿಸುತ್ತ ಕನೆಯುತ್ತ ನಿಂತಿರುತ್ತಾರೆ
ಮಾರಾಟಕ್ಕೆ ಬಂದ ಸೇಬುವಿನಂತೆ ಈ ಹುಡಿಗೆಯರು
ಮುಂಜಾನೆದ್ದು ರಾತ್ರಿಯ ಹಾದಿ ಕಾಯುತ್ತಿರುತ್ತಾರೆ

ರಾತ್ರಿಯೆಲ್ಲ ಎಚ್ಚರದಿಂದಿರುವ
ಸಮುದ್ರ ಎಲ್ಲರ ಕ್ಷೇಮ ಸಮಾಚಾರ ಕೇಳುತ್ತ
ಶಾಂತವಾಗಿ ತನ್ನಷ್ಟಕ್ಕೆ ತಾನೇ ಹರಿಯುತ್ತಿರುತ್ತದೆ

ಡಾಂಬರಿನ ಕಪ್ಪು ರಸ್ತೆಯನ್ನು ಪಕ್ಕಕ್ಕೆ
ತಳ್ಳಿ ಫುಟ್‌ಪಾತ್ ಮೇಲೆ ಹೆಂಗಸರು ಒಲೆ ಉರಿಸುತ್ತಿರುತ್ತಾರೆ.

ಬಸ್ಸಿನಲ್ಲಿ ಹೆಣಗಳಂತೆ ಜೋತಾಡುವ ದೇಹಗಳು
ಹೊಟ್ಟೆಯಲ್ಲಿ ಹಸಿವಿನ ಸ್ಫೋಟ
ಹಿಪ್ನೋಟೈಜ್‌ಗೆ ಬಳಗಾದ ಗಾರ್ಡನ್
ಅಲ್ಲಿಯ ಪಕ್ಷಿಗಳು ಹೂವುಗಳು ಎಲೆಗಳು

ದುರ್ಗಿಮುರ್ಗಿಯಂತೆ ಪ್ರತಿಯೊಬ್ಬನೂ ತನ್ನ
ದೇಹದ ಮೇಲೆಯೇ ಬಾರ್‌ಕೋಲು ಬೀಸುತ್ತಿರುತ್ತಾರೆ

ದತ್ತಕ ತೆಗೆದುಕೊಂಡ ರಸ್ತೆಯಲ್ಲಿಯ ಸರ್ಕಲ್‌ಗಳು
ಗೊತ್ತುಗುರಿ ಇಲ್ಲದೆ ಅಡ್ಡಾಡುವ ಅನಾಥ ಹುಡುಗರು
ಟಾಂಗಾದ ಕುದುರೆಯಂತೆ ನಾವು
ಕಾಲಬಾಹ್ಯರಾಗುತ್ತಿದ್ದೇವೆ; ಕಾಲ ಸಮೀಪದಲ್ಲಿಯೇ
ನಿಂತು ನಗುತ್ತಿರುತ್ತದೆ

ಹಸಿರು ಕಣ್ಣಿನ ಹುಡಿಗೆಯರು ಮೈ ಮುದುಡುತ್ತ
ರಾತ್ರಿ ತಮ್ಮ ತಮ್ಮ ಕೋಣೆಗಳಲ್ಲಿ ಬಂಧ್ಧಿತರಾಗುತ್ತಿರುತ್ತಾರೆ

ಕೆಲವೊಮ್ಮೆ ಗಾಬರಿಬಿದ್ದು ರಾತ್ರಿ ಬೇರಾತ್ರಿ
ತಮ್ಮ ಗರ್ಭಾಶಯಗಳನ್ನು ತಾವೇ
ಪರೀಕ್ಷಿಸಿಕೊಳ್ಳುತ್ತಾರೆ

ಈಗಲೂ ಈ ನಗರದಲ್ಲಿ
ಹಸಿರು ಕಣ್ಣಿನ ಅನೇಕ ಹೊಸ ಹುಡಿಗೆಯರು
ಒದರುತ್ತ ಚೀರುತ್ತ ಹಡೆಯುತ್ತಿರುತ್ತಾರೆ

ಅವರ ಗರ್ಭದಲ್ಲಿಂದ ಹಳೆಯ
ಮಕ್ಕಳೇ ಹುಟ್ಟುತ್ತಿರುತ್ತಾರೆ ಈ
ಹಿಂದೆ ಅವು ಹಳೆಯ
ಹಸಿರು ಕಣ್ಣಿನ ಹುಡಿಗೆಯರಿಗೆ ಹುಟ್ಟಿದ್ದವು.

'One is not born but rather becomes, a women' ಬಾಲ್ಯಾವಸ್ಥೆಯಲ್ಲಿ ಕೇವಲ ಒಂದು ಜೀವಿಯಾಗಿರುವ ಮಗು, ನಂತರ ವರ್ಷಗಳಲ್ಲಿ ತನ್ನನ್ನು ಗಂಡೆಂದೋ, ಹೆಣ್ಣೆಂದೋ ಗುರುತಿಸಿಕೊಂಡು ಸಾಮಾಜಿಕವಾಗಿ ಪ್ರಚಲಿತವಾಗಿರುವ ನಿಯಮಗಳೊಡನೆ ಹೊಂದಿಕೊಂಡು, ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಹೋರಾಟ ನಡೆಸುತ್ತದೆ. ಹೀಗೆ, ಅಸ್ತಿತ್ವಕ್ಕಾಗಿ ಹೋರಾಡುವ ಹಂತ ಮಗುವಿನ ಹುಟ್ಟಿನೊಡನೆಯೇ ಪ್ರಾರಂಭವಾಗುತ್ತದೆ. ಈ ದೆಸೆಯಲ್ಲಿ ಗಂಡುಮಗುವಿಗೆ ತನ್ನ ಹಿರಿತನದ ಪ್ರಜ್ಞೆ ಬೆಳೆಸಿಕೊಳ್ಳಲು, ಹೋರಾಟದ ಪ್ರಜ್ಞೆಯ ತೀವ್ರತೆಯ ಜೊತೆಗೆ ಆತ್ಮ ಬಲ ಬೆಳೆಸಿಕೊಳ್ಳಲು ಸಹಾಯವಾಗುವ ಪರಿಸರ, ಹೆಣ್ಣು ಮಗುವಿನ ವಿಚಾರದಲ್ಲಿ ತೀರಾ ಕ್ರೂರವಾಗುತ್ತದೆ. ಕೀಳರಿಮೆಯ ಭಾವನೆಯೊಂದಿಗೆ, ಸ್ವತಂತ್ರ ವ್ಯಕ್ತಿತ್ವದ ಕಲ್ಪನೆಯೇ ಇಲ್ಲದೇ ಗಂಡಸರ ಪ್ರಪಂಚದಲ್ಲಿ ಅಡಿಯಾಳಾಗಿ ತನ್ನನ್ನು ಗುರುತಿಸಿಕೊಳ್ಳುತ್ತಾಳೆ ಹೆಣ್ಣು.

ಯಾವೊಂದು ದೈಹಿಕ ರಚನೆಯಾಗಲೀ, ಮಾನಸಿಕ ಕಾರಣಗಳಾಗಲೀ, ಅಥವಾ ಆರ್ಥಿಕ ಪ್ರಭೇದಗಳಾಗಲೀ ಹುಟ್ಟಿನಿಂದಲೇ ಜೀವಿಯನ್ನು ಹೆಣ್ಣು ಅಥವಾ ಗಂಡೆಂದು ನಿರ್ಧರಿಸುವುದಿಲ್ಲ.

- ಸಿಮೋನ್ ದಿ ಬುವ

ಒಡಲ ಸಂಕಟಕೆ ಗಡಿ ಉಂಟೇ? ಆಚೆ-ಈಚೆ ಉಂಟೆ?

1989, 90 ನೆನಪಿಲ್ಲ. ಹಿಮಾಲಯದ ಟ್ರೆಕ್ಕಿಂಗ್‌ಗೆ ಸ್ನೇಹಿತರೊಡನೆ ಹೊರಟಿದ್ದೆ. ಎಷ್ಟೋ ವರ್ಷಗಳಿಂದ ಕುತೂಹಲ ಹುಟ್ಟಿಸಿದ್ದ ಹಿಮಾಲಯವೆಂಬ ವಿಸ್ಮಯವನ್ನು ಕಾಣಲು ಅನುಭವಿಸಲು ಶಕ್ತಿಗಿಂತ ಉತ್ಸಾಹ, ಪುಳಕಗಳೆ ಅಲ್ಲಿಯವರೆಗೂ ಎಳೆದೊಯ್ಯಿತು. ಶ್ರೀನಗರ ತಲುಪಿ ಅಲ್ಲಿ ಎರಡು ದಿನಗಳ acclan matisation ಮುಗಿಸಿ ಹೊರಟಿದ್ದು ಕಾರ್ಗಿಲ್ base campಗೆ. ತಲುಪಿದ್ದು ಸಂಜೆಯ ವೇಳೆಗೆ. ಭೋರ್ಗರೆವ ಸುರು ನದಿಯ ಪಕ್ಕದಲ್ಲಿ ಟೆಂಟ್‌ಗಳು, ಅದ್ಭುತ ಬೆಟ್ಟಗಳು, ಸುತ್ತಲು ನೋಡಿದಾಗ ಹೊಟ್ಟೆ ತುಂಬಿದಂತೆ ಅನುಭವ. ಕತ್ತಲು ಆವರಿಸುತ್ತಿದ್ದಂತೆ ಹಿಮಾಲಯ ತಾನೇನೆಂದು ತೋರಿಸಲು ಶುರು ಮಾಡಿತು. ಮೂಳೆ ಕೊರೆದು ಒಳನುಗ್ಗುವ ಚಳಿ. ಪ್ಯಾಂಟಿನ ಒಳಗೊಂದು ಉಲ್ಲನ್ ಪ್ಯಾಂಟ್, ಟೀ ಶರ್ಟ್, ಅದರ ಮೇಲೊಂದು ಶರ್ಟ್ ಅದರ ಮೇಲೊಂದು ಸ್ವೆಟರ್ ಅದರ ಮೇಲೊಂದು ಜರ್ಕಿನ್, ಉಲ್ಲನ್ ಟೋಪಿ, ಗ್ಲೌಸ್, ಸಾಕ್ಸ್, ನೆಲದ ಮೇಲೆ ಕಾರ್ಪೆಟ್ ಅದರ ಮೇಲ್ ಬೆಡ್‌ಶೀಟ್, ಸ್ಲಿಪ್ಪಿಂಗ್ ಬ್ಯಾಗ್, ಮೇಲೆ ಎರಡು ಕಂಬಳಿಗಳು ಬೆಚ್ಚಗಿರಲು. ಮಧ್ಯರಾತ್ರಿಯಾದರು ಉಚ್ಚೆ ಮಾಡಲು ಎದ್ದರೆ ಸಂಕಟ ಉಲ್ಲನ್ ಕೋಟೆಯೊಳಗಿಂದ ಎದ್ದು ಹೊರಹೋಗಿ ಕೂತರೆ ಥರಗುಟ್ಟಿಸುವ ಚಳಿ. ಕುಂಡಿ ಮರಗಟ್ಟಿ ಮತ್ತೆ ಯಥಾಸ್ಥಿತಿ ಬರಲು ಅರ್ಧಗಂಟೆ. ಬೆಳಗ್ಗೆ 5.30ಕ್ಕೆ ಏಳಬೇಕು. Bed Tea ಕುಡಿದು ಹಲ್ಲುಜ್ಜಲು ನೀರಿಗೆ ಕೈಯಿಟ್ಟರೆ ಬೆರಳುಗಳು ಸೆಟೆದುಕೊಳ್ಳುವಷ್ಟು ಕೊರೆಯುವ ನೀರು. ಇನ್ನೂ 20 ದಿನಗಳು ಹೇಗೆ ಕಳೆಯುವುದಪ್ಪಾ ಎನಿಸಿತ್ತು. 10 ಕೆ.ಜಿ. ಭಾರ ಹೊತ್ತು 7-8 ದಿನಗಳ ಕಾಲ ನಡೆದು ಲದಾಕ್ ತಲುಪಬೇಕು. ಬೆಳಗ್ಗೆ ಹೊರಟರೆ ಸಂಜೆ ವೇಳೆಗೆ ಮತ್ತೊಂದು ಟೆಂಟ್ ತಲುಪಿ ರಾತ್ರಿ ಅಲ್ಲಿ ಉಳಿದು ಮತ್ತೆ ನಡೆಯಬೇಕು. ಎತ್ತರ ಪ್ರದೇಶದಲ್ಲಿ ನಡೆಯುವುದೆಂದರೆ ಹೆಜ್ಜೆ ಇಡುವುದು. ಸೂಜಿ ಮೊನೆಯು ಭಾರವೆನಿಸುವಾಗ 10 ಕೆ.ಜಿ. ಭಾರ ಬೆನ್ನ ಮೇಲೆ. ಇಬ್ಬರು ಒಟ್ಟಿಗೆ ನಡಯುವಷ್ಟೆ ಅಗಲದ ದಾರಿ. ಒಂದೆಡೆ ಪ್ರಪಾತ ಇನ್ನೊಂದೆಡೆ ಗಂಭೀರ, ಪರ್ವತಗಳು. ಏಳೆದೆಳೆದು ಬರುವ ಉಸಿರು, ಯಾರು ಮಾತನಾಡಿಸಿದರು ಸಿಟ್ಟು. ಒಬ್ಬಂಟಿಯಾಗಿ, ಭಾರ ಹೊತ್ತು ನಡೆಯುವಾಗಿನ ಏಕಾಕಿತನ ಕಣ್ಣೀರು ಬರಿಸಿದರೆ ಪರ್ವತಗಳು ಕೊಂಕದೆ Ruthless ಆಗಿ ನಿಂತಿರುತ್ತವೆ. ಪರ್ವತ, ಪ್ರಪಾತ, ಹೊಳೆವ ಹಿಮ, ವಿಚಿತ್ರ ಮೌನ, ಹೊಟ್ಟೆಯೊಳಗೆ ಭೀತಿಯೊ, ವಿಸ್ಮಯವೋ ಹೇಳಬಾರದ ಭಾವನೆ ಹುಟ್ಟಿಸಿದ್ದವು. ಮನೆ ತಲುಪುವೆನೇ? ಅನ್ನಿಸಿತು.

"ನಾನು ಕಾರ್ಯ ನಿರ್ವಹಿಸುತ್ತಿರುವ ಜಾಗದಲ್ಲಿ ಹಿಮಬಿದ್ದು ಹೋಗುವ-ಬರುವ ಸಾಧನಗಳಿಲ್ಲ, ಪತ್ರವಾಗಲಿ, ಹಣವಾಗಲಿ ಕಳಿಸುವ ಸಾಧನಗಳಿಲ್ಲ. ನಿಮ್ಮ ಪತ್ರ ಕೂಡ ಬಹಳ ಕಷ್ಟದಲ್ಲಿ ಐದಾರ್ ತಿಂಗಳ ನಂತರ ಸಿಕ್ಕಿದೆ. ಇಲ್ಲಿ ನಮ್ಮನ್ನು ಏನೆಂದು ಕೇಳುವವರಿಲ್ಲ. ಕೇಳುವವರಿಲ್ಲದಂತಹ ಇಕ್ಕಟ್ಟಿನ ಸ್ಥಳದಲ್ಲಿದ್ದೇವೆ. ನಿಮ್ಮ ಆಶೀರ್ವಾದ, ದೇವರ ದಯೆಯೇ ಮುಖ್ಯ" ಕಾರ್ಗಿಲ್ ಯುದ್ಧದಲ್ಲಿ ಮಡಿದ ಯಂಕಟನ ಪತ್ರವನ್ನು ಪೇಪರ್‌ನಲ್ಲಿ ಓದಿದಾಗ ಹೊಟ್ಟೆಯೊಳಗೆ ಅದೇ ಭಾವನೆ.

ಥರಗುಟ್ಟುವ ಥಂಡಿಯಲ್ಲಿ ಏಕಾಕಿಯಾಗಿ, ಆಕ್ರಮಣಕ್ಕೆ ಎಚ್ಚರವಾಗಿ ಕಾಯುತ್ತಿದ್ದ ಯಂಕಟನಿಗೆ ಏನನಿಸಿರಬಹುದು? ಯಾವುದನ್ನು ಲೆಕ್ಕಿಸದ ಷೆಲ್‌ನಿಂದ ಸಿಡಿದ ಚೂರುಗಳು ಯಂಕಟನ ತಲೆ, ಕುತ್ತಿಗೆಯನ್ನು ಸೀಳಿದ್ದವು. ಕುಡಿಯಲು ಗಂಜಿಗೂ ಗತಿಯಿಲ್ಲದ ಸ್ಥಿತಿಯಲ್ಲಿ ಯಂಕಟನ ಅಪ್ಪ ಅಮ್ಮ ವೆಂಕಟಗಿರಿ, ಶಿವಮ್ಮ ಹಾಸನದಿಂದ ಕೊಡಗಿನ ಕಾಫಿ ತೋಟಕ್ಕೆ ಕೂಲಿ ಮಾಡಲು ಗುಳೆ ಹೋಗಿದ್ದರು. ಬಡತನ ನೀಗಿಸಲು ಕೊಡಗಿನಿಂದ ಕಾರ್ಗಿಲ್‌ಗೆ ಹೋದ ಯಂಕಟ ಛಿದ್ರಗೊಂಡ ಹೆಣವಾಗಿ ಬಂದ. ಹೊಟ್ಟೆಸಂಕಟ ತುಂಬಿಕೊಂಡು ಹೊಟ್ಟೆಪಾಡಿಗಾಗಿ ವೆಂಕಟಗಿರಿ, ಶಿವಮ್ಮ ಇಳಿ ವಯಸ್ಸಿನಲ್ಲೂ ಕೂಲಿ ಮಾಡಬೇಕು. ಯಂಕಟನ ಹೆಂಡತಿ ನೀಲಮ್ಮ ಅಸ್ತಮಾ ಕಾಡುತ್ತಿರುವ ಪುಟ್ಟಮಗ ಕಿರಣನಿಗಾಗಿ ದುಡಿಯಲು ದಿನವೂ 10 ಕಿ.ಮೀ. ನಡೆದು ಶಾಲೆಗೆ ಹೋಗಬೇಕು.

23 ವಯಸ್ಸಿನ ಧೋಂಡಿಬಾ ನಾರಾಯಣ ಅಡಗಿಸಿಟ್ಟ ಬಾಂಬ್‌ಗೆ ಬಲಿಯಾದ. ಅವನು ಕಳಿಸುತ್ತಿದ್ದ 500 ರೂ. ಅಮ್ಮ, ಅಪ್ಪ, ತಮ್ಮತಂಗಿಯರ ಬದುಕಿಗೆ ದೊಡ್ಡ ಆಸರೆಯಾಗಿತ್ತು. ದುಡಿಯುವ ಮಗನನ್ನು ಕಳೆದುಕೊಂಡಿರುವ ನಾನೇನೂ ಮಾಡಲಿ ಎನ್ನುವ ಆ ತಾಯಿಯ ಸಂಕಟಕ್ಕೆ ಶವವನ್ನು ತಂದ ಅಧಿಕಾರಿಗಳು 25,000 ರೂ.ನ ಸಮಾಧಾನ್ನ ನೀಡಿದ್ದಾರೆ. ಎರಡನೇ ಮಗನಿಗೂ ಸೇನೆಯಲ್ಲಿ ಕೆಲಸ ಕೊಡಿಸುವುದಾಗಿ ಹೇಳಿದರಂತೆ. ಸರ್ಕಾರವೇನಾದರೂ ಹಣ ನೀಡಿದರೆ ಮಗಳ ಮದುವೆ ಮಾಡಿ ಉಳಿದಿದ್ದರಲ್ಲಿ

ಹೊಟ್ಟೆಗೆ ತಿನ್ನುತ್ತೇವೆ ಎಂದ ಧೊಂಡಿಬಾನ ತಾಯಿಗೆ ಮತ್ತೊಬ್ಬ ಮಗನನ್ನು ಸೇನೆಗೆ ಕಳುಹಿಸಿ ಕಳೆದುಕೊಳ್ಳಲು ಇಷ್ಟವಿಲ್ಲ. ಯುದ್ಧಕ್ಕೆ ಹೋಗಬೇಕೆಂದರೆ ಸೇನೆಯ ಗೊಡವೆಯೇ ಬೇಡ ಎನ್ನುವ ತಮ್ಮ ಪ್ರಭಾಕರನಿಗಿನ್ನು 19 ವರ್ಷ.

27 ವರ್ಷದ ಸಿದ್ದನಗೌಡ ಗುಂಡೇಟಿಗೆ ಪ್ರಾಣತೆತ್ತ. ಮೂರು ಎಕರೆ ಜಮೀನೇ ಆಸರೆಯಾಗಿದ್ದ ಅವನ ಮನೆಯವರು ಅವನಿಂದಲೆ ಮನೆ ಬೆಳೆಯಬೇಕೆಂದು ಆಸೆ ಪಟ್ಟಿದ್ದರು, ಮನೆ ಬೆಳೆಸಬೇಕಿದ್ದ ಮಗ ಚಿತ್ರಪಟವಾಗಿ ಹಾರ ಹಾಕಿಸಿಕೊಂಡು ಕೂತಿದ್ದಾನೆ. ತಾಯಿ ಕೈಚೆಲ್ಲಿ ಕೂತರೆ 20 ವಯಸ್ಸಿನ ಹೆಂಡತಿ ನೆಲಕ್ಕೆ ದೃಷ್ಟಿನೆಟ್ಟು ಮೌನವಾಗಿದ್ದಾಳೆ.

ತಾಯಿ, ಹೆಂಡತಿ ಇಬ್ಬರು ಪುಟ್ಟ ಮಕ್ಕಳು, ತಂಗಿ ಆಕೆಯ ಮಗು ಎಲ್ಲರ ಹೊಣೆ ಹೊತ್ತಿದ್ದ 35 ವರ್ಷದ ಮಡ್ಡಿವಾಳಪ್ಪ ಎರಡು ತಿಂಗಳ ನಂತರ ನಿವೃತ್ತಿಯಾಗಬೇಕಿತ್ತು. ಎದೆಯನ್ನು ಸೀಳಿದ ಗುಂಡೇಟು ಅವನನ್ನು ಈ ಲೋಕದಿಂದಲೇ ನಿವೃತ್ತಿಗೊಳಿಸಿತು. ಮನೆ ಬೀದಿಪಾಲಾತರಿ ಎಂದು ಗೋಳಾಡುತ್ತಾರೆ ವಯಸ್ಸಾದ ತಾಯಿ ಸಾಂವಕ್ಕ, 22 ವಯಸ್ಸಿನ ಪತ್ನಿ ಮಹಾದೇವಿ, ತಂಗಿ ಗೌರವ್ವ ಪುಟ್ಟ ಮಕ್ಕಳೊಂದಿಗೆ ಆಸರೆಯಿಲ್ಲದೆ ತತ್ತರಿಸಿದ್ದಾರೆ. ಅಧಿಕಾರಿಗಳು ಹೆಣ ಸುಡಲು ಕಟ್ಟಿಗೆ 500 ರೂ. ಕೊಟ್ಟು ಹೋದುದನ್ನು ಬಿಟ್ಟರೆ ಯಾವ ಪರಿಹಾರವೂ ಕುಟುಂಬಕ್ಕೆ ಸಿಕ್ಕಿಲ್ಲ.

44 ವಯಸ್ಸಿನ ಮೇದಪ್ಪ ಸ್ವಯಂ ನಿವೃತ್ತಿ ತೆಗೆದುಕೊಂಡು ಕಟ್ಟುತ್ತಿದ್ದ ಮನೆಯನ್ನು ಪೂರ್ಣಗೊಳಿಸಿ ನೆಮ್ಮದಿಯಾಗಿರಬೇಕೆಂದು ಕೊಂಡಿದ್ದರು. ಬಾಂಬ್ ಆಸ್ಫೋಟವಾಗಿದ್ದನ್ನು ಕೇಳಿ ಹೋರಾಟಕ್ಕೆ ಅಣಿಯಾಗುವಾಗ ಮಿಸ್ ಫೈರನ್ನು ಸರಿಪಡಿಸಲು ಹೋಗಿ ತಾವೆ ಬಲಿಯಾದರು. ತಂದೆ, ತಾಯಿ, ತಮ್ಮ ಮೇದಪ್ಪನವರನ್ನೆ ಅವಲಂಬಿಸಿದ್ದರು. ಮಗನನ್ನು ಕಳೆದುಕೊಂಡ ತಾಯಿ ಅಮವ್ವನಿಗೆ ಯಾವ ಹೆಮ್ಮೆಯೂ ಇಲ್ಲ. "ಮಗನನ್ನು ಕಳೆದುಕೊಂಡು ಎಂಥ ಹೆಮ್ಮೆ ನನಗೆ, ಬೆಳಗ್ಗೆ - ಸಾಯಂಕಾಲ ಕಣ್ಣೀರು ಹಾಕೋದೆ ಹೆಮ್ಮೆ ಆಗೋಗಿದೆ" ಎಂದು ಗೋಳಾಡಿದ್ದರು. ಬೇರೆ ಜಾತಿಯವರಾದ್ದರಿಂದ ಗಂಡನ ಮನೆಯವರೊಂದಿಗೆ ಸಂಬಂಧ ಚೆನ್ನಾಗಿಲ್ಲದಿರುವುದರಿಂದಾಗಿ ಹೆಂಡತಿ ಪಾರ್ವತಿಗೆ ಮಗನೊಬ್ಬನೆ ಭರವಸೆ.

ಷೆಲ್ ದಾಳಿಯಲ್ಲಿ ಅಸುನೀಗಿದ ಕಾವೇರಪ್ಪ, ಮನೆಕಟ್ಟುವ, ಹೆಣ್ಣು ಮಗುವೊಂದನ್ನು ದತ್ತು ತೆಗೆದುಕೊಳ್ಳುವ ಕನಸು ಕಂಡಿದ್ದರು. ಮನೆ ಕಟ್ಟುವ ಜಾಗದಲ್ಲೆ ಕಾವೇರಪ್ಪ ಮಣ್ಣಾದರು. ಸಾಯುವ ದಿನವೇ ಟಿ.ವಿ. ನೋಡಿ ಚಿಂತೆ ಮಾಡಬೇಡ ಎಂದು ಹೆಂಡತಿಗೆ ಪತ್ರ ಬರೆದಿದ್ದರಂತೆ. ಪತ್ನಿ ಶೋಭಾಳಿಗೆ ಈಗ ಎಲ್ಲವೂ ನೆನಪಷ್ಟೆ.

ಕಾವಲು ಕಾಯುತ್ತಿದ್ದಾಗ ಹಾವು ಕಡಿದಿದ್ದರಿಂದ ಅಸುನೀಗಿದ ಗಣೇಶ್ ಅವರಿಗೆ ಹೆಂಡತಿ ಇಬ್ಬರು ಮಕ್ಕಳಿದ್ದಾರೆ.

ಹೀಗೆ ಒಬ್ಬರಾದ ಮೇಲೆ ಒಬ್ಬರು ಸೈನಿಕರು ವೀರ ಮರಣ ಹೊಂದುತ್ತಿದ್ದಂತೆಯೇ ವೀರಸ್ವರ್ಗ ಸೇರುತ್ತಿದ್ದಾರೆ. ಸಕಲ ಸರ್ಕಾರಿ ಮರ್ಯಾದೆಗಳೊಂದಿಗೆ, ಅಶ್ರುತರ್ಪಣದೊಂದಿಗೆ ತೇಲುತ್ತಾ ವೀರ ಸ್ವರ್ಗ ತಲುಪುತ್ತಿದ್ದಾರೆ. Bullet-Proof ಕೋಟು ತೊಟ್ಟು, Bullet-Proof ಕಾರಿನಲ್ಲಿ ಓಡಾಡುವ ನಾಯಕರುಗಳು ಕಂಬನಿ ಮಿಡಿದು, ದೇಶ ರಕ್ಷಿಸಿದೆವೆಂದು ವೀರಾವೇಶದಿಂದ ಕೂಗಾಡುತ್ತಿದ್ದಾರೆ. ಮಡಿದ ಯೋಧರ ಕುಟುಂಬಕ್ಕಾಗಿ ದೇಶದ ವ್ಯಾಪಾರಿಗಳು, ಸಿನಿಮಾದವರು, ಸಹೃದಯರು, ಕಲಾವಿದರು ಹಣ ಎತ್ತಲು ಎಡಬಿಡದೆ ದುಡಿಯುತ್ತಿದ್ದಾರೆ. ಕಾರ್ಗಿಲ್ ಹೆಸರಿನಲ್ಲಿ ಹೋಟೆಲುಗಳು ಪ್ರಾರಂಭಿಸಿ, ಕಾರ್ಗಿಲ್ ಹೆಸರಿನಲ್ಲಿ ಸಿನಿಮಾ ಮಾಡಿ ದೇಶಭಕ್ತಿ ತೋರಿಸಲಾಗುತ್ತಿದೆ. ಟಿ.ವಿ.ಯಲ್ಲಿ ಸಿನಿಮಾ ತಾರೆಯರು ನಾವು 90 ಕೋಟಿ ಭಾರತೀಯರು ನಿಮ್ಮ ಹಿಂದೆ ಇದ್ದೇವೆ ಎಂದು ಕಣ್ಣೊದ್ದೆ ಮಾಡಿಕೊಂಡು ಕರೆ ನೀಡುತ್ತಿದ್ದಾರೆ. ಹಾಡು, ನೃತ್ಯಗಳ ಮೂಲಕ ಕಾರ್ಗಿಲ್ ಯೋಧರಿಗೆ ನಮನ ಮಾಡಲಾಗುತ್ತಿದೆ. ಸಿನಿಮಾದವರು ಪಾಪ ಕಡುಬಡವ ಯೋಧರ ಕುಟುಂಬಕ್ಕಾಗಿ ಹಣ ಎತ್ತಲು ಹಿಂದೆ ಬೀಳಲಿಲ್ಲ. Knockout ಸೋಡದವರು ಪ್ರಾಯೋಜಿಸಿದ್ದ ಕಾರ್ಯಕ್ರಮದಲ್ಲಿ ಬೆವರು ಸುರಿಸಿ ಹಾಡಿ, ಕುಣಿದು ಕುಪ್ಪಳಿಸಿ, ರೋಷದಿಂದ ಉಬ್ಬೆಹೊಯ್ದು ಪಾಕಿಸ್ತಾನ ಮುಳುಗಿಸಿ (ಮೊದಲೆ ಹೊಯ್ದಿದ್ದರೆ ಎಷ್ಟೊ ಯೋಧರ ಪ್ರಾಣ ಉಳಿಯುತ್ತಿತ್ತು) ಯೋಧರ ಕುಟುಂಬಕ್ಕಾಗಿ ಹಣ ಎತ್ತಿದರು, ಪತ್ರಿಕೆಗಳು "ದೇಶಕ್ಕಾಗಿ ಜೀವಕೊಟ್ಟ ಯೋಧರು, ವೀರಪುತ್ರರು, ದೇಶಕ್ಕಾಗಿ ಬಲಿದಾನ ಮಾಡಿದ ಕಲಿಗಳು, ವೀರಗಾಥೆ ಎಂದೆಲ್ಲ ಹಾಡಿ ಹೊಗಳಿ ಹಣ ಸಂಗ್ರಹಿಸಿ ಪ್ರಧಾನ ಮಂತ್ರಿ ನಿಧಿಗೆ ಅರ್ಪಿಸಿದರು. ಯೋಧರ ಪತ್ನಿ ಮಕ್ಕಳನ್ನು ಕರೆಸಿ ಮಡಿದ ಯೋಧರ ಫೋಟೋವನ್ನು ಮಕ್ಕಳ ಹೆಂಡತಿಯ ರೆಕ್ಕೆಯಲ್ಲಿ ಹಿಡಿಸಿ, ಪ್ರದರ್ಶಿಸಿ, ಸನ್ಮಾನಿಸಿ ಚೆಕ್ಕುಗಳನ್ನು ನೀಡುವಾಗ ಫೋಟೋ ತೆಗೆಸಿಕೊಂಡು ಬೀಗಿದರು.

ಯೋಧರು ವೀರಮರಣವನ್ನಪ್ಪಿ, ವೀರಸ್ವರ್ಗ ಸೇರಿ ಹುತಾತ್ಮರಾದರು. ಅವರನ್ನೇ ಅವಲಂಬಿಸಿದ್ದ ವೃದ್ಧ ತಾಯಿತಂದೆಯರು, ಹೆಂಡ್ತಿ ಮಕ್ಕಳೂ ಸಿಗುವ ಪರಿಹಾರಕ್ಕೆ ಕಾಯುತ್ತಲೆ ಇದ್ದಾರೆ. ದೇಶಭಕ್ತರು ಸಂಗ್ರಹಿಸಿದ ಹಣದ ಹೊಳೆ ಗೌರವ್ವ, ಸಾವಿತ್ರಿ, ಪಾರ್ವತಿಯರ ಮನೆಯವರೆಗೂ ಹರಿಯಲೇ ಇಲ್ಲ. ವೀರ ಸ್ವರ್ಗ ತಲುಪಿಸಿದ ಮೇಲೆ ಮತ್ತೇನು ಬೇಕು.

ವೀರಸ್ವರ್ಗ, ಸರ್ಕಾರಿ ಸನ್ಮಾನದ ಅಂತ್ಯಕ್ರಿಯೆ ಸುಲಭವಾಗಿ ಸಿಕ್ಕುವುದಲ್ಲ. ಕೇರಳದ ಯೋಧನೊಬ್ಬ ಕಾರ್ಗಿಲ್‌ನಲ್ಲಿ ಮಡಿದ. ಹೆಣವನ್ನು ಊರಿಗೆ ಕಳುಹಿಸಿದರು. ಅಂತ್ಯಕ್ರಿಯೆಗೆ ಸರ್ಕಾರದ ಸನ್ಮಾನ ಎಲ್ಲಾ ತಯಾರಾಗಿತ್ತು. ಆದರೆ ಕೊನೆಗಳಿಗೆಯಲ್ಲಿ ಎಲ್ಲವನ್ನೂ ರದ್ದು ಪಡಿಸಲಾಯ್ತು. ಕಾರಣವೇನೆಂದರೆ ಆ ಯೋಧ ಹೋರಾಡಿ ಮಡಿದಿರಲಿಲ್ಲ. ಆತ್ಮಹತ್ಯೆ ಮಾಡಿಕೊಂಡು ಸತ್ತಿದ್ದ ಎಂದು ಕೊನೆಗಳಿಗೆಯಲ್ಲಿ ಸಿಕ್ಕ ಸುದ್ದಿಯಿಂದಾಗಿ ಸರ್ಕಾರಿ ಸನ್ಮಾನವನ್ನು ತಟಕ್ಕನೆ ರದ್ದು ಪಡಿಸಲಾಗಿದ್ದ ಯೋಧನ ಇಳಿವಯಸ್ಸಿನ ತಂದೆಯುಂದಿರಿಗೆ ಎಂತಹ ಅವಮಾನ, ಸಂಕಟವಾಗಿರಬಹುದೆಂದು ಮನುಷ್ಯರಾದವರು ಊಹಿಸಿಕೊಳ್ಳಬಹುದು.

ಯುದ್ಧವಾಗುತ್ತಲೆ ಇರುತ್ತದೆ. ಪ್ರತಿಬಾರಿ ಯುದ್ಧವಾದಾಗಲೂ ವಿಧವೆಯರು ಬದುಕು ನಡೆಸಲು ಹೋರಾಟಕ್ಕೆ ಅಣಿಯಾಗಬೇಕು. ಒಂಟಿಯಾಗಿ, ಆಯುಧ ಅಸ್ತ್ರಗಳಿಲ್ಲದೆ, ಯಾವ ಸಾಧನೆಗಾಗಿ ಈ ಯುದ್ಧ? ರಕ್ಷಣೆ, ಪ್ರತಿಷ್ಠೆಯ ಹೆಸರಿನಲ್ಲಿ ಬಾಳಿ ಬದುಕಬೇಕಾದವರ ಮಾರಣ ಹೋಮಕ್ಕೆ ಕೊನೆ ಎಂದು? ಯಾರ ಉದ್ಧಾರವಾಗುತ್ತಿದೆ ಯುದ್ಧದಿಂದ? ಕಾರ್ಗಿಲ್ ಯುದ್ಧಕ್ಕೆ 5,000 ಕೋಟಿ ಹಣ ಖರ್ಚಾಗಿದೆ. 1 ಶೆಲ್ಲಿನ ಬೆಲೆ - 40 ಸಾವಿರ - ಸಾವಿರಾರು ಶೆಲ್‌ಗಳನ್ನು ಸುಡಲಾಗಿದೆ. ಯಾರ ಒಳಿತಿಗಾಗಿ?

ನಿರುದ್ಯೋಗ, ಬಡತನ, ಅನಾರೋಗ್ಯದ ಸಮಸ್ಯೆಗಳ ಬಗ್ಗೆ ಎಳ್ಳಷ್ಟು ಕಾಳಜಿ ಇಲ್ಲದ ದೇಶವಾಳುವ ಭೂಪತಿಗಳು ಮಾತ್ರ ತಮ್ಮ ಹುನ್ನಾರಗಳಿಗೆ, ಅಧಿಕಾರದ ದುರಾಸೆಗೆ ಕಾರ್ಗಿಲ್ ಯುದ್ಧವನ್ನು ಚೆನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಯುದ್ಧಮಾಡಿದ್ದು ಮಹಾತ್ಸಾಧನೆಯೆಂದು ಬಡಯೋಧರ ಬಲಿಯನ್ನೆ ಚಲಾವಣೆ ಮಾಡಿಕೊಳ್ಳುತ್ತಿದ್ದಾರೆ. ಕಾರ್ಗಿಲ್‌ನಲ್ಲಿ ಮಡಿದ ಯೋಧರ ಕುಟುಂಬಕ್ಕೆ ಹಣ ಸಂಗ್ರಹವಾಗುತ್ತಿರುವುದನ್ನು ಕಂಡು ಗಡಿ ಕಾಯುವ ಇತರ ಸೈನಿಕರು ನಾವು ನಿತ್ಯವು ಗಡಿ ಕಾಯುವಾಗ ಅಪಾಯವನ್ನು ಎದುರಿಸುತ್ತಲೇ ಇರುತ್ತೇವೆ. ಹಲವಾರು ಸೈನಿಕರು ಸಾಯುತ್ತಲೆ ಇರುತ್ತಾರೆ, ಅಂಗವಿಕಲರಾಗುತ್ತಿರುತ್ತಾರೆ. ನಮ್ಮ ಕುಟುಂಬಗಳಿಗೂ ಪರಿಹಾರ ಬೇಕೆಂದಿದ್ದಾರೆ. ನಿತ್ಯವು ಸಾಯುವ ಯೋಧರಿಗಿಂತ ಯುದ್ಧ ಮಾಡಿ ಮಡಿದ ಯೋಧರ ಮರಣವೇ ವೀರ ಮರಣ. ಅವರಿಗೇ ಸಕಲ ಸರ್ಕಾರಿ ಸನ್ಮಾನ. ಯುದ್ಧ ಆಳುವವರು ಪ್ರತಿಷ್ಠೆ, ಶಕ್ತಿ ಪ್ರದರ್ಶನಕ್ಕಾಗಿ ಹೂಡುವ ಭೀಕರ ಆಟವೆ ಹೊರತು ಅದಕ್ಕೆ ಯಾವ ಅರ್ಥ, ಉದ್ದೇಶಗಳಿಲ್ಲ ಇಡಿ ಜಗತ್ತಿನಲ್ಲಿ.

ಅಸ್ಸಾಂನ ತಿರುಬರಿ ಹಳ್ಳಿಯ ಚೋಪೆಂದರ್‌ನಾಥ್ ಎಂಬ ಹವಾಲ್ದಾರ ಕಾಶ್ಮೀರದಲ್ಲಿ ಉಗ್ರಗಾಮಿಗಳೊಂದಿಗೆ (ಕಾರ್ಗಿಲ್ ಯುದ್ಧಕ್ಕೆ ಮುಂಚೆ) ಹೊಡೆದಾಡುವಾಗ ಸಿಡಿದ ಬಾಂಬ್‌ನಿಂದಾಗಿ ತನ್ನ ಎಡಗಾಲು, ಬಲಗಣ್ಣನ್ನು ಕಳೆದುಕೊಂಡದ್ದಲ್ಲದೆ ಕಿವುಡಾದ ದೆಹಲಿಯ ಆಸ್ಪತ್ರೆಯೊಂದರಲ್ಲಿ ಇನ್ನೂ ಚಿಕಿತ್ಸೆ ಪಡೆಯುತ್ತಿರುವ ಅವನ ಸ್ಥಿತಿಯ ಬಗ್ಗೆ ಮನೆಯವರಿಗೆ ತಿಳಿದಿಲ್ಲ. ಮೋಟಾರ್ ಸೈಕಲ್ ಅಪಘಾತವಾಗಿ ಚಿಕಿತ್ಸೆ ಪಡೆಯುತ್ತಿದ್ದೇನೆಂದು ಹೇಳಿದ್ದಾನಂತೆ. ಅವನಿಗೆ ಸಿಗುವ ಸಹಾಯಧನವಾಗಲಿ, ಪಿಂಚಣಿಯಾಗಲಿ ಕಾರ್ಗಿಲ್ ಯೋಧರಿಗೆ ಸಿಗುವ ಸಹಾಯಧನಕ್ಕಿಂತ ಕಡಿಮೆ.

ಮುಂದೇನು ಎಂದು ಕೇಳಿದಾಗ ನನಗೇನೂ ದಾರಿ ಕಾಣಿಸುತ್ತಿಲ್ಲ. ಎಲ್ಲವೂ ಅಂಧಕಾರಮಯವಾಗಿದೆ. ಕಿವಿ ಕೇಳದ ಒಂದು ಕಣ್ಣಿಲ್ಲದೇ ಕಾಲಿಲ್ಲದ ನನ್ನಂತಹ ನಿಷ್ಪ್ರಯೋಜಕನೊಂದಿಗೆ ಯಾರು ಹೆಣಗಲು ಬಯಸುತ್ತಾರೆ? ಎನ್ನುತ್ತಾನೆ. ಬುಲೆಟ್ ಪ್ರೂಫ್ ನಾಯಕರು, Knockout ಕಾರ್ಯಕ್ರಮದ ವೀರರು ಉತ್ತರಿಸಿಯಾರೆ? ಗಡಿಪ್ರದೇಶದಲ್ಲಿ ವಾಸವಾಗಿರುವ ಮುದುಕಿಯೊಬ್ಬಳು ಕಾರ್ಗಿಲ್ ಯುದ್ಧ ನೋಡಿ "ಗಡಿ ಆಚೆಯೋ ಈಚೆಯೋ, ಒಟ್ಟಿನಲ್ಲಿ ಸತ್ತವರು ನನ್ನ ಮಕ್ಕಳಷ್ಟೇ" ಎಂದಿದ್ದಾಳೆ. ಯುದ್ಧದ ಹೆಸರಿನಲ್ಲಿ ಜೀವನಾಶವನ್ನ ಸಮರ್ಥಿಸಿಕೊಳ್ಳುವುದು ನ್ಯಾಯವೇ?

- *ಸರಸ್ವತಿ ಮು.*

ಶೃಂಗರಿಸಲ್ಪಟ್ಟ ಶಬ್ದಗಳು

ಭಾರೀ ಭಾರೀ ವಸ್ತ್ರಾಭರಣಗಳಲ್ಲಿ
ಶೃಂಗರಿಸಲ್ಪಟ್ಟ ಶಬ್ದಗಳು ನನ್ನನ್ನು ಸ್ವಾಗತಿಸಿದವು

ಹಳೆಯ ಕಂದಾಚಾರದ ಕಾಲು ಹಾದಿ
ಗಳಿಂದ ಅವು ಜರ್ಝರಿತವಾಗಿದ್ದವು

ಕಾಲು ಹಾದಿಯ ಬೇಲಿಯೂ ಹಳೆಯದಾಗಿತ್ತು
ಅಲ್ಲಿಯ ಮುಳ್ಳುಗಳಿಗೆ ತುಕ್ಕು ಹಿಡಿದಿತ್ತು

ಈ ಶಬ್ದಗಳನ್ನು ನೋಡುತ್ತ ಧಿಕ್ಕರಿಸುತ್ತ
ನನ್ನ ಅಸ್ತಿತ್ವವನ್ನು ಅಲ್ಲಿ ಹುಡುಕ ಹತ್ತಿದೆ

ಕೊಳೆತು ನಾರುವ ಗಟಾರುಗಳಲ್ಲಿಂದ
ಹೊಸ ಜೀವನವನ್ನು ಶೋಧಿಸಿದೆ

ಇಲ್ಲಿಯ ಪ್ರತಿ ಹುಳಗಳೂ ನನಗೆ ಹೊಸದಾಗಿದ್ದವು
ಸಮಾಧಾನದಿಂದ ನಿಟ್ಟುಸಿರು ಬಿಟ್ಟೆ

-ಇಲ್ಲಿಂದ ನನ್ನ ಚಂದ್ರ ಈಗ
ಹೆಚ್ಚು ಸ್ಪಷ್ಟವಾಗಿ ಕಂಡುಬರುತ್ತಿದ್ದ

ರಾತ್ರಿಯ ಮೊದಲ ಪ್ರಹರ

ರಾತ್ರಿಯ ಮೊದಲ ಪ್ರಹರವನ್ನು
ನಾನು ನನ್ನ ಸೆರಗಿಗೆ ಜೋಡಿಸಿ ಹೊಲಿಗೆ ಹಾಕಿದೆ
ಆದರೆ ಪ್ರತಿಸಲ ಹೊಲಿಗೆ ಬಿಚ್ಚಿ ಅದು
ಎಲ್ಲೋ ಏನೋ ಎದ್ದು ಹೋಗುತ್ತಿತ್ತು: ನನಗೆ ಗೊತ್ತಿಲ್ಲದಂತೆ

ಮುಂಜಾನೆ ನನ್ನ ಹಾಸಿಗೆ
ಖಾಲಿಯಾಗಿರುತ್ತಿತ್ತು: ನಾನು ಉನ್ಮತ್ತಳು
ಸಮುದ್ರದಲ್ಲಿ ಮೀಯಬೇಕೆಂಬುದು ನನ್ನ ಮಹಾದಾಶೆ

ಕೈಯಲ್ಲಿ ಸೂಜಿ ಇದೆಯೆಂದು
ಎಲ್ಲವನ್ನೂ ಶಾಶ್ವತವಾಗಿ ಹೊಲಿಯಲು ಆಗುವುದಿಲ್ಲ

ಕೆಲವು ಸಲ ನಾನೇ ಹಾಕಿದ
ಹೊಲಿಗೆಯನ್ನು ನಾನೇ ಬಿಚ್ಚುತ್ತಿದ್ದೆ

ಅದೇ ಆಗ ಮೂಡಿ ಬರುತ್ತಿದ್ದ
ಸೂರ್ಯನೆಡೆಗೆ ನೋಡಿದೆ: ನನ್ನ ಮೈಗೆ

ಆತ ನಾಲ್ಕೆಂಟು ಎಳೆಯ
ಕಿರಣಗಳ ಹೊಲಿಗೆ ಹಾಕುತ್ತಿದ್ದ!

ವಯಾಗ್ರ ಮತ್ತು ಎರಡನೆ ಮದುವೆ

ವಯಾಗ್ರ ವಿತರಕರ ಮೇಲೆ ಸೌದಿಯ ಮಹಿಳೆಯೊಬ್ಬಳು ಪರಿಹಾರವನ್ನು ಕೋರಿ ಕೇಸು ಹಾಕಿದ್ದಾಳೆ. ವಯಾಗ್ರದಿಂದಾಗಿ ತನ್ನ ವೈವಾಹಿಕ ಜೀವನದಲ್ಲಿ ಬಿರುಕು ಉಂಟಾಗಿದ್ದನ್ನು ಈ ಮಹಿಳೆ ಇಸ್ಲಾಮಿಕ್ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾಳೆ.

35 ವರ್ಷಗಳ ಈಕೆಯ ಗಂಡ ತನ್ನ ಹೆಂಡತಿಯೊಂದಿಗೆ ನೆಮ್ಮದಿಯ ಜೀವನವನ್ನು ಮಾಡುತ್ತಿದ್ದ. ಈತ ಇತ್ತೀಚೆಗೆ ಈ ಗುಳಿಗೆಗಳನ್ನು ತೆಗೆದುಕೊಳ್ಳಲು ಪ್ರಾರಂಭಿಸಿದ ಮೇಲೆ ಇವರ ವೈವಾಹಿಕ ಜೀವನದಲ್ಲಿ ಏರುಪೇರುಗಳು ಪ್ರಾರಂಭವಾದವು. ಈ ಗುಳಿಗೆಯ ಪರಿಣಾಮವಾಗಿ, ಈತ ಇನ್ನೊಂದು ಮದುವೆಯಾಗುವ ತಯಾರಿಯಲ್ಲಿದ್ದಾನೆ. ತನ್ನ ಗಂಡನಲ್ಲುಂಟಾದ ಈ ಬದಲಾವಣೆಗೆ ವಯಾಗ್ರ ಗುಳಿಗೆಗಳು ಎಂದರಿತ ಈಕೆ ಇಸ್ಲಾಮಿಕ್ ನ್ಯಾಯಾಲಯದ ಕಟ್ಟೆ ಏರಿ "ತನ್ನ ಗಂಡ ಈ ಗುಳಿಗೆಗಳನ್ನು ತೆಗೆದುಕೊಳ್ಳದಂತೆ ಹಾಗೂ ಪುನಃ ಮದುವೆಯಾಗದಂತೆ, ತಡೆಯಬೇಕೆಂದು ಕೋರಿದ್ದಾಳೆ. ನಾಲ್ಕು ಜನ ಹೆಂಡತಿಯರನ್ನು ಸಮಾನವಾಗಿ ನೋಡಿಕೊಳ್ಳುವುದಾದರೆ, ಇಸ್ಲಾಂ ಧರ್ಮದ ಪ್ರಕಾರ ನಾಲ್ಕು ಜನ ಹೆಂಡತಿಯರನ್ನು ಮದುವೆಯಾಗಬಹುದೆಂದು, ಆದರೆ ಈ ವಯಾಗ್ರ ಗುಳಿಗೆಗಳನ್ನು ಮಾತ್ರ ವೈದ್ಯರ ಸಲಹೆ ನೀಡಿದರೆ ಮಾತ್ರ ವಯಾಗ್ರ ಗುಳಿಗೆಗಳನ್ನು ತೆಗೆದುಕೊಳ್ಳಬಹುದೆಂದು ನ್ಯಾಯಾದೀಶರು ತೀರ್ಪು ನೀಡಿದ್ದಾರೆ!

ಹರ್ಯಾಣಾದ ಝಾಡಮಾಲಿಗಳ ಹೋರಾಟ

ನಳ ನಳಿಸುವ ಸ್ವಚ್ಛ ನಗರದ, ಪಟ್ಟಣದ ಜನರಿಗೆ ಸ್ವಚ್ಛತೆಯ ವಿಷಯದಲ್ಲಿ ಸ್ವಲ್ಪ ಹೆಚ್ಚು ಕಮ್ಮಿಯಾದರೂ ಸಹಿಸಲಾಗುವುದಿಲ್ಲ. ಗೊಣ ಗೊಣ, ಮಣ-ಮಣ, ಹಿಡಿಶಾಪ, ಇವೆಲ್ಲ ತಕ್ಷಣ ಹೊರಹೊಮ್ಮುತ್ತವೆ. ನಮ್ಮ ನಿಮ್ಮ ಪೇಟೆ-ಪಟ್ಟಣಗಳನ್ನು ಸ್ವಚ್ಛಗೊಳಿಸುವ ಜಾಡಮಾಲಿಗಳು. ಇವರ ಬವಣೆಯ ಚಿತ್ರಣ ಕಾಣದ ನಾವು ಬೆನ್ನು ಬಗ್ಗಿಸಿ ದುಡಿಯುವ ಇವರನ್ನು ಕಂಡಿದ್ದೇವಷ್ಟೇ.

ಹರ್ಯಾಣದಲ್ಲಿ ಕೂಡ (ರಾಜ್ಯದಲ್ಲಿ) ಪಟ್ಟಣ ಹಾಗೂ ನಗರವನ್ನು ಸ್ವಚ್ಛಗೊಳಿಸುವ ಕಸುಬಿನಲ್ಲಿ ತೊಡಗಿಸಿ ಕೊಂಡಿರುವವರನ್ನು ಝಾಡಮಾಲಿಗಳು ಎನ್ನುತ್ತಾರೆ. ಇವರು ಹಿಂದುಳಿದ ವರ್ಗಕ್ಕೆ ಸೇರಿದವರು. ಇಲ್ಲಿ ವಿಶೇಷವಾಗಿ ಈ ಕಾರ್ಯದಲ್ಲಿ ತೊಡಗಿರುವವರು ಹೆಂಗಸರು. ಬೇರೆ ಕೆಲಸಗಳ ವಿಚಾರ ಬಂದಾಗ ಇಂತಿಷ್ಟೇ ಮೀಸಲಾತಿ ಇರಬೇಕೆಂದು ಬೊಬ್ಬೆ ಹೊಡೆಯುವ ನಾವು ಅಮಾನವೀಯ, ಅವಮಾನಕರವಾದ ಇಂಥ ಹುದ್ದೆಗಳು ಬಂದಾಗ ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಪ್ರತಿಶತ 100ರಷ್ಟು ಬಿಟ್ಟುಕೊಡುವ ಔದಾರ್ಯವಂತರು!! ಇದು ಸಾರಾ ಸಗಟಾಗಿ ಅವರ ಸ್ವತ್ತು ಬಿಡಿ. ಇವರು ಇತ್ತೀಚೆಗೆ ಹೋರಾಟ ಮಾಡಬೇಕಾಗಿ ಬಂದದ್ದು ಸಂಬಳ ಹೆಚ್ಚಿಸಿ ಎಂದಾಗಲಿ, ಸೇವಾ ಸವಲತ್ತು ಹೆಚ್ಚಿಸಿ ಎಂದಾಗಲಿ ಅಲ್ಲದೆ "ತಾವು ದುಡಿದ, ದುಡಿಯುತ್ತಿರುವ ಸೇವೆಗೆ ಸಕಾಲಕ್ಕೆ ಸಂಬಳ ಕೊಡಿ ಎಂಬುದಾಗಿತ್ತು".

ಮೂರ್‍ನಾಲ್ಕು ತಿಂಗಳಿಂದ ಸಂಬಳವಿಲ್ಲದೆ ದುಡಿಯುತ್ತಿದ್ದ ಈ ಹೆಂಗಸರು ಹರ್ಯಾಣದಲ್ಲಿ 18,000ದಷ್ಟಿದ್ದಾರೆ. ಪಟ್ಟಣಗಳಲ್ಲಿ 2 ಲಕ್ಷ ಜನಸಂಖ್ಯೆಗೆ 400 ಮಂದಿ ಝಾಡಮಾಲಿಗಳನ್ನು ನೇಮಿಸಿಕೊಂಡಿದ್ದ ಸರ್ಕಾರ, ಜನಸಂಖ್ಯೆ 6 ಲಕ್ಷ ಮುಟ್ಟಿದಾಗಲೂ ಅಷ್ಟೇ ಜನರಿಂದ ದುಡಿಸಿಕೊಳ್ಳುತ್ತಿರುವುದಲ್ಲದೆ ಪ್ರತಿಷ್ಠರ ಸೇವೆಗಾಗಿ 400ರಲ್ಲಿ ನೂರು ಜನರನ್ನು ಕಾದಿರಿಸಿಟ್ಟಿರುತ್ತದೆ.

ಮೈ ಮುರಿಯುವ ಕೆಲಸದಿಂದ ದೊರಕುತ್ತಿದ್ದ ಪುಡಿಕಾಸು 3-4 ತಿಂಗಳಾದರೂ ಬಂದು ಸೇರದಾಗ ಸಂಬಳ ಕೊಡಿ ಎಂದು ಆಗ್ರಹಿಸಿ ಹೋರಾಟಕ್ಕಿಳಿದರು. ಕಸಪರಿಕೆಗಳನ್ನು ಕೆಳಗಿಟ್ಟ ಮಹಿಳೆಯರು ಸರ್ಕಾರಕ್ಕೆ ಈ ಮೂಲಕವಾದರು ತಮ್ಮ ಅಳಲನ್ನು ತೋಡಿಕೊಳ್ಳ ಬಯಸಿದರು.

ಸರ್ಕಾರದ ಕಣ್ಣು ಕೆಂಪಾಯಿತು. ಸರ್ಕಾರದ ಧೋರಣೆಯನ್ನು ಪುರಸ್ಕರಿಸಿದ ಸ್ಥಳೀಯ ಸ್ವಯಂ ಸೇವಕ ಸಂಘದ ಹುಡುಗರು/ಯುವಕರು ಇವರಿಗೆ ಬುದ್ಧಿ ಕಲಿಸಲು ತಾವೇ ಪರಕೆ ಹಿಡಿದರು. ಬುದ್ಧಿ ಕಲಿಸುವ ಆವೇಶ ಎರಡು ದಿನದಲ್ಲಿ ಇಳಿದು ಕಸ ಗುಡಿಸುವ ಕಾಯಕ ಕೊನೆಯದಾಗಿ ಹೇಳದೇ ಕೇಳದೆ ತಲೆಮರೆಸಿಕೊಳ್ಳುವಂತಾಯಿತು.

ಮುಷ್ಕರ ನಿರತ ಮಹಿಳೆಯರ ಕಣ್ಣು ಆಶಾಭಾವನೆಯಿಂದ ಈಗಲಾದರೂ ಇವರಿಗೆ ನಮ್ಮ ಕೆಲಸದ ಸಂಕಷ್ಟ ಅರಿವಾಗಲೆಂದು ಹಾತೊರೆಯಿತು. ಕೆಲವರು ಈ ಯುವಕರನ್ನು ಮೂದಲಿಸಿದ್ದೂ ಉಂಟು. ಇವರ ಸೊಲ್ಲು ಅಡಗಿಸಲು ಸರ್ಕಾರ ಮಾಡಿದ ಇನ್ನೊಂದು ಮಹತ್ತರ ಕಾರ್ಯವೆಂದರೆ 16 ಜನ ಇರಬಹುದಾದ ಜೈಲು ಕೊಠಡಿಗಳಲ್ಲಿ 80 ಜನ ಮಹಿಳೆಯರನ್ನು ತುರುಕಿದರು. ಹೆದರದ, ನಿರಾಶೆಗೊಳ್ಳದ ಇವರ ವರ್ತನೆ ಸರ್ಕಾರವನ್ನು ಕಂಗಾಲಾಗಿಸಿತು. ಪೇಟೆ-ಪಟ್ಟಣ, ಚರಂಡಿಗಳು ಗಬ್ಬು ನಾರತೊಡಗಿದವು. ನಾಗರೀಕರ ಚಡಪಡಿಕೆ ಹೆಚ್ಚಾಯಿತು. ಶರಣಾದ ಸರ್ಕಾರ ಅವರ ಬೇಡಿಕೆ ಈಡೇರಿಸಲೇಬೇಕಾಯ್ತು. ಇದು ಅವರಿಗೆ ಸಂದ ಜಯ, ಒಗ್ಗಟ್ಟಿನ ಫಲ. ಆದರೆ ನಾಗರೀಕರೆನ್ನುವ ನಿರಾಸಕ್ತಿ ಹಾಗೂ ಸರ್ಕಾರದ ಅಹಂಕಾರದ ಫಲವೂ ಹೌದು. ಅಲ್ಲವೆ?

- ಬಿ. ಎಸ್. ಶಾರದ

ಇವೆಲ್ಲಾ ನಡೆಯುವುದೇ ಹೀಗೆ !

ಭಾವನೆಗಳ ಮೇಲಿನ ಆಟ
ಕಣ್ಣುಗಳ ನೋಟ
ಕೆಮ್ಮಿಂದ, ಧ್ವನಿಯಿಂದ
ಸೆಳೆದ ನೋಟ
ಹುಟ್ಟು ಹಾಕಿದ ನಿರೀಕ್ಷೆ
ಮೈಯ ಪುಲಕ
ಒಂಟಿಯಾಗಿದ್ದಾಗ ಹುಟ್ಟಿಸಿದ
ಮೈಯ ಬಿಸಿ
ಸದ್ದಿಲ್ಲದೇ ಕರಗಿದ್ದು ಹೇಗೆ?

ಎಲ್ಲಿಯೋ ನಿರೀಕ್ಷೆ
ನಿರೀಕ್ಷೆಯಲ್ಲಿನ ನಿರಾಸೆ
ಮಾತಿಲ್ಲದ ಮೌನದ ಲಾಸ್ಯ

ಚಿಗುರಿ ಮರಿಯಂತೆ
ಹರಿಣಿ ಕಣ್ಣಿನ
ಮುದ್ದು ಮುಖದ ಅವಳಾಸೆ ಒಮ್ಮೆ

ಮಾತಿನ ಮೂಲಕ
ಏನೋ ಸತ್ಯ ಬಿಚ್ಚಿಡುವ
ಇವಳಾಸೆ ಒಮ್ಮೆ

ಇವೆರಡರ ಮಧ್ಯೆ
ತುಂಬ ಮೈಯಿನ
ಒನಪಿನ ಇನ್ನೊಂದು ಕಣ್ಣಾಸೆ

ಎಲ್ಲಾ ಮೌನದಲ್ಲಿ
ತುಂಡು ತುಂಡು ಮಾತಿಗೇನೋ ಅರ್ಥ
ಕಲ್ಪನೆಯ ಲಾಸ್ಯದಲಿ
ಒಮ್ಮೆ ಇವಳು
ಒಮ್ಮೆ ಅವಳು
ಮಗದೊಮ್ಮೆ ಮತ್ತೊಬ್ಬಳು

ಎಲ್ಲವೂ ಮೌನವಾಗಿ
ಮೌಲ್ಯಗಳ ಚೌಕಟ್ಟಿನೊಳಗೆ
ನಯವಾಗಿ
ನಾಜೂಕಾಗಿ
ಹುಷಾರಾಗಿ
ನುಣುಚಿಕೊಳ್ಳುವ ಹಾಗೆ.

ಗೆಳೆಯಾ
ಕ್ಷಣಗಳಲ್ಲಿ
ಮನಸ್ಸಿಗೆ
ದೇಹಕ್ಕೆ
ಚೈತನ್ಯ ತುಂಬುವ
ಕಣ್ಣುಗಳೊಳಗಿನ
ಯಾತನೆ
ಮೈ-ಮನಸ್ಸಿಗಾಗುವ
ಮಧುರತೆಯೊಳಗಿನ
ಘಾಸಿ
ಕಾದ-ಕ್ಷಣಗಳ
ನೋವು
ನಿನಗರ್ಥವಾದೀತೇ?

ತೀವ್ರತೆಯ ಉತ್ತುಂಗ
ಒಂದು ಕಡೆ

ಮುಗ್ಧ ಕಣ್ಣುಗಳ
ಭಾವನೆಗಳ ಜೊತೆ

ಆಟವಾಡುವ ಬಗೆಗೆ
ರೋಷ ಇನ್ನೊಂದೆಡೆ

ದ್ವಂದ್ವಗಳ ಉಯ್ಯಾಲೆಯಲಿ

ಮಾತಿನ ಮಲ್ಲಿ
ಮೌನಳಾಗುತ್ತಾಳೆ

ಮೌನವಾದ
ಹಿಂಸೆಯ ಬಗ್ಗೆ

ಮಾತಲ್ಲಿ ಹೇಳಲಾಗದೇ
ದೂರ ಸರಿದು ಬಿಡುತ್ತಾಳೆ.

- ಎಚ್.ಎಸ್.ಸಿ.

ಓದುಗರ ವಿಭಾಗ

ಮಹಿಳೆಯ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ, ಮಹಿಳೆಯರೇ ಪ್ರಕಟಿಸುವ, ಮಹಿಳಾ ಸಮಾನತೆ, ಸ್ವಾತಂತ್ರ್ಯ ಪಡೆಯುವಲ್ಲಿ ಹಲವರ ಅಭಿಪ್ರಾಯ ಉತ್ತಮ ಲೇಖನಗಳನ್ನು ಪ್ರಕಟಿಸುತ್ತಿರುವ ತಮ್ಮ ಕಾರ್ಯ ಸ್ತುತ್ಯಾರ್ಹ. ಆರ್ಥಿಕ ನೆರವಿಲ್ಲದೆ ಪತ್ರಿಕೆ ಪ್ರಕಟಿಸುವುದು ಅಸಾಧ್ಯ.

ಟಿ.ಎಂ.ಎಸ್. ವಾಗೀಶ ಶರ್ಮಾ

❄ ❄ ❄

ಮಾನಸದ ಮೂರು ಸಂಚಿಕೆಗಳು ನನ್ನ ಕೈ ತಲುಪಿದೆ. ಪತ್ರಿಕೆ ಸ್ತ್ರೀ ಸಂವೇದನೆಗೆ ವೇದಿಕೆಯಾಗುವ ಲಕ್ಷಣಗಳನ್ನು ಮೈಗೂಡಿಸಿ ಕೊಂಡಿದೆ. ನಿಮ್ಮೆಲ್ಲರ ಪ್ರಯತ್ನ ಮೆಚ್ಚುವಂತಹದ್ದು. ಆದರಲ್ಲಿ ಈ ದುಬಾರಿ ಕಾಲದಲ್ಲಿ ಪತ್ರಿಕೆಗಳನ್ನು ನಡೆಸುವುದು ತುಂಬಾ ಕಷ್ಟದ ಕೆಲಸ. ಪತ್ರಿಕೆಯ ಒಳಪುಟಗಳಿಗೆ ಬಳಸುವ ಕಾಗದ ಇನ್ನು ಸ್ವಲ್ಪ ಉತ್ತಮಗುಣಮಟ್ಟದಾದರೆ ಒಳ್ಳೆಯದೆನಿಸುತ್ತದೆ. ಮತ್ತು ಹಿರಿಯ ಮಹಿಳಾ ಲೇಖಿಕರನ್ನು ಸಂದರ್ಶಿಸಿ ಅವರ ಬರಹ, ಬದುಕು ವಿವರಗಳೊಂದಿಗೆ ಬೇರೆ ಬೇರೆ ರಾಜ್ಯಗಳ ಮಹಿಳಾ ಪರಿಸ್ಥಿತಿಗಳು ಸಾಹಿತ್ಯ ನೀಡಿದರೆ ಹೆಚ್ಚು ಒಳಿತು. ಅಲ್ಲದೆ ನಮ್ಮ ರಾಜ್ಯದ ಗ್ರಾಮೀಣ ಮಹಿಳೆಯರ ಬದುಕು, ಕಲೆ, ನೋವು, ನಲಿವುಗಳ ಬಗ್ಗೆ ನಿಮ್ಮ ಪತ್ರಿಕೆ ಸ್ವೀಕರಿಸಿದರೆ ಹೆಚ್ಚು ಜನರ ಹೃದಯದಾಳಕ್ಕೆ ಹೋಗುತ್ತದೆ. ಎಂಬುವುದು ನನ್ನ ಆಶಯ. ಪತ್ರಿಕೆ ಎತ್ತರೇತ್ತರ ಬೆಳೆಯಲಿ ಎಂದು ಹಾರೈಸುತ್ತೇನೆ.

ಎಂ. ಮಂಜುನಾಥ, ಬಮ್ಮನಕಟ್ಟಿ

❄ ❄ ❄

ಮಾನಸ ಪತ್ರಿಕೆ ನನಗೆ ತಲುಪುತ್ತಿದೆ. ತುಂಬಾ ಚೆನ್ನಾಗಿದೆ. ಖಂಡಿತವಾಗಿಯೂ ಮಾನಸಕ್ಕೆ ಉಜ್ವಲ ಭವಿಷ್ಯವಿದೆ. ನಿಮ್ಮ ಸಾಹಸ ಕಾರ್ಯಕ್ಕೆ ನನ್ನ ಬೆಂಬಲ ಹಾಗೂ ಮೆಚ್ಚಿಗೆ ಸದಾ ಇದೆ.

ಡಾ. ಸಂಕನಾಳ, ವಿಜಾಪುರ

ಪ್ರಿಯರೇ,

ತಾವು ವಿಶ್ವಾಸದಿಂದ ಕಳಿಸಿರುವ ಕೆಲವು ತಮ್ಮ ಮಾನಸ ಪತ್ರಿಕೆಗಳು ಮತ್ತು ತಾವು ಬರೆದ ಕಾಗದ ಬಂದು ತಲುಪಿದೆ. ಹೆಣ್ಣು ಮಕ್ಕಳಿಗೆ, ಮಹಿಳೆಯರಿಗೆ ಮೀಸಲಾಗಿರುವ ಈ ಪತ್ರಿಕೆಯನ್ನು ನೋಡಿದಾಗ ತುಂಬಾ ಅತ್ಯುತ್ತಮವಾದ ಲೇಖನ ಗಳನ್ನೊಳಗೊಂಡು ಸ್ತ್ರೀಯರ ಬಗ್ಗೆ ಹೆಚ್ಚಿನ ವತ್ತುಕೊಟ್ಟು ಅವಳಿಗಾಗುತ್ತಿರುವ ಶೋಷಣೆಗೆ, ಕಾನೂನಿನ ರಕ್ಷಣೆಯ ಬೆನ್ನೆಲುಬಾಗಿ ನಿಲ್ಲುವಂತೆ ತಮ್ಮ ಪತ್ರಿಕೆ ಸಹಾಯಕಾರಿಯಾಗಿದೆ. ಇದರ ಜೊತೆಗೆ ಕಥೆ, ಕವನ, ಅಂಕಣಗಳನ್ನು ತಾವು ಪ್ರಾರಂಭ ಮಾಡಿರಿ. ಸ್ತ್ರೀಯುವ ಬರಹಗಾರರಿಗೆ ಅವಕಾಶ ನೀಡುತ್ತ ಹೋದರೆ ಇನ್ನು ಹೆಚ್ಚುಹೆಚ್ಚು ಪತ್ರಿಕೆ ಬೇಡಿಕೆಯಾಗಬಹುದು.

ಲೇ. ಶಿವಶಂಕರ ಕಟ್ಟಿಮನಿ

❄ ❄ ❄

ಪತ್ರಿಕೆ ಮಹಿಳೆಯರಲ್ಲಿ ಜಾಗೃತಿ ಮೂಡಿಸುವಂಥದ್ದಿದೆ. ಒಳ್ಳೆಯ ಪತ್ರಿಕೆ ತಾವು ಅದನ್ನು ನನಗೆ ಕಳಿಸಿದ್ದಕ್ಕಾಗಿ ಧನ್ಯವಾದಗಳು. ತಮ್ಮ ಪ್ರಯತ್ನಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ನಾನು ಪತ್ರಿಕೆ ಚಂದಾದಾರಳಾಗ ಬಯಸುತ್ತೇನೆ.

ಶೈಲಾ ಭಟ್ಟಿ, ಧಾರವಾಡ.

❄ ❄ ❄

ಮಾನಸ ತಲುಪಿತು. ನಿಜಕ್ಕೂ ಮಹಿಳಾ ಪರ ದಿಟ್ಟ ದನಿಯಾಗಿ ಹೊರಹೊಮ್ಮಿದೆ. ಪುರುಷರಿಗೂ ಆತ್ಮೀಯ ವೆನಿಸುವುದಲ್ಲದೇ ಚಿಂತನೆಗೆ ಹಚ್ಚಿಸುವಂತಿದೆ. ನಿಮ್ಮೆಲ್ಲರ ಪ್ರಯತ್ನ ಸಫಲವಾಗಲಿ, ನನ್ನಂಥ ಅನೇಕರ 'ಬೆಂಬಲ' ಮಾನಸಕ್ಕೆ ಇದ್ದೇ ಇದೆ.

ವಿಜಯಕಾಂತ ಪಾಟೀಲ, ವಕೀಲರು.

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 40 ರೂ.

ಸಂಸ್ಥೆಗಳಿಗೆ : 100 ರೂ

ಸಂ. ಮಂಡಳಿ

REGD No. KRNA 324

BOOK-POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067